
# ಅಪರಂಜಿ

ತಿಳಿನಗೆಯ ಕಾರಂಜಿ

ಜನವರಿ 2020




ಬಿಡಿ ಪ್ರತಿ: ರೂ.10.00



# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 37
ಸಂಚಿಕೆ – 4
ಜನವರಿ– 2020

**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ವಿ.ಆರ್. ನಾಥ್
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.

## *ಈ ಸಂಚಿಕೆಯಲ್ಲಿ.....*

| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಪುಸ್ತಕ ಪರಿಚಯ | ಕೃಷ್ಣ ಸುಬ್ಬರಾವ್ | 6 |
| ಅಪರಂಜಿಯ ಪಲಾಯನ ಠುಸ್ | ಬಿ. ಎಸ್. ಶೈಲಜಾ | 10 |
| ಹೊಸ ವರ್ಷ .... | ಗಣೇಶ ಹೆಗ್ಗಡೆ | 11 |
| ನನ್ನ ಸ್ವಾತಂತ್ರಹರಣದ ಪ್ರಸಂಗ | ಮಾಲತಿ ಮುದಕವಿ | 14 |
| 2020ರಲ್ಲಿ ಬರಬಹುದಾದ ಚಿತ್ರಗಳು... | | 20 |
| ಸೀ, ನೋ, ಹಿಯರ್ ಇವಿಲ್ | ಸಿ.ಆರ್. ಸತ್ಯ | 23 |
| ವಸತಿ ಸಮುಚ್ಚಯದ (ವಿ)ರಾಗ | ಕೆ.ವಿ. ರಾಜಲಕ್ಷ್ಮಿ | 26 |
| ಸನ್ಮಾನ | ವಸುಮತಿ ಉಡುಪ | 29 |
| ಹೊಸ ವರ್ಷದ ಚಿಂತನೆಗಳು | ಸುಕೇಶವ | 32 |
| ತುಂತುರು | ದಂನಅ | 34 |
| ಏನು ಮಾಡುವುದು? | ಸಹನಾ ಪ್ರಸಾದ್ | 35 |
| 2020ಕ್ಕೆ ಸ್ವಾಗತ | ಎನ್. ರಾಮನಾಥ್ | 36 |
| ಗೊರಕಾಸುರ ಪ್ರಸಂಗವು | ಜಯಶ್ರೀ ದೇಶಪಾಂಡೆ | 37 |
| ಅಜ್ಜಿಯ ಇತಿಮಿತಿ ಐಡಿಯಾ | ಇ. ಆರ್. ರಾಮಚಂದ್ರನ್ | 39 |

**ಮುಖಪುಟ ವ್ಯಂಗ್ಯಚಿತ್ರ : ಜಿ. ಎಸ್. ನಾಗನಾಥ್** (ಇಂಟರ್ನೆಟ್)

*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. *ಸಂಪರ್ಕ* : email: koravanjiaparanji@gmail.com ದೂ: 9845264304

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● **ಪ್ರಕಾಶ್**



**ಅಪರಂಜಿ ಬಳಗದ ಎಲ್ಲರಿಗೂ ಹೊಸವರ್ಷದ ಶುಭಾಶಯಗಳು**

****

'ಅರ್ಹರಿಗೇ ಮಂತ್ರಿ ಪಟ್ಟ ' –ಪತ್ರಿಕೆ

**ಈಗ ಜಟಾಪಟಿ ಶುರುವಾಗುತ್ತೆ !!**

****

ವೈದ್ಯ ವಿದ್ಯಾರ್ಥಿಗಳಿಗೆ ಜೈಲುಗಳಲ್ಲಿ ಇಂಟರ್ನೆಟ್‌ಗೆ ಮನವಿ. – ಸುದ್ದಿ.

**ಹಿರಿಯ ವೈದ್ಯರಿಗೂ ಅವಕಾಶ ಮಾಡಿಕೊಡಬೇಕಲ್ಲ!!**

****

'ಡಿ.ಸಿ.ಎಂ. ಸ್ಥಾನಕ್ಕೆ ಪೈಪೋಟಿ ಇಲ್ಲ'

'ತಾರಕಕ್ಕೇರಿದ ಡಿ.ಸಿ.ಎಂ. ಪೈಪೋಟಿ'

**ಪತ್ರಿಕೆಯಲ್ಲಿ ಒಂದೇ ಪುಟದಲ್ಲಿ !!**

****

ಉಗ್ರರಿಗೆ ಅವಕಾಶವಿಲ್ಲ – ಪಾಕ್ ನಾಯಕರು

**ಹಾಗಲಕಾಯಿಗೆ ........?!**

****

ಈರುಳ್ಳಿದರದ ಹಾವು ಏಣಿ ಆಟ – ಪತ್ರಿಕೆ

**ಶೀರ್ಷಿಕೆ ಎಂದರೆ ಹೀಗಿರಬೇಕು. !!**

****

ಅಕ್ರಮ ಕಟ್ಟಡ ಸಕ್ರಮಕ್ಕೆ ಒಪ್ಪಿಗೆ – ಪತ್ರಿಕೆ

**ಕರ್ನಾಟಕದ ಅನೂಚಾನ ಪರಂಪರೆ !!**

## ನಮ್ಮ ನಿಮ್ಮಲ್ಲಿ

● ಶಿವಕುಮಾರ್

ನಮ್ಮ ತಂದೆ ರಾ.ಶಿ.ಯವರು ಕೊರವಂಜಿಯನ್ನು ನಡೆಸುತ್ತಿದ್ದಾಗ, ಜನವರಿ ತಿಂಗಳಲ್ಲಿ ಹೊಸವರ್ಷದ ವಿಶೇಷ ಸಂಚಿಕೆಯನ್ನು ತರುಲ್ಲವೇ ಅಂತ ಕೇಳಿದರೆ, 'ಕಣಿ ಹೇಳೋ ಕೊರವಂಜಿಗೆ ಜನವರಿ ಹ್ಯಾಗ್ರೀ ಹೊಸ ವರ್ಷ ಆಗುತ್ತೆ, ಯುಗಾದೀಗೆ ಮಾತ್ರ ಅವಳು ಹೊಸ ಸೀರೆ ಉಟ್ಟು ಹೊಸ ವರ್ಷ ಬರಮಾಡಿಕೊಳ್ಳೋದು' ಅಂತ ಹೇಳಿಬಿಡುತ್ತಿದ್ದರು. ಅಪರಂಜಿ ಈಗಿನ ಕಾಲದವಳು. ಅವಳಿಗೆ ಎರಡೂ ಹೊಸವರ್ಷಗಳು ಸಂಭ್ರಮಿಸೋಕ್ಕೆ ಒಂದು ಅವಕಾಶ ಅಷ್ಟೇ. ಹಾಗಾಗಿ ಈ ಸ್ಪಷ್ಟ ದೃಷ್ಟಿಯ 2020 ವರ್ಷವನ್ನು ನಿಮ್ಮೆಲ್ಲರೊಂದಿಗೆ ಅಪರಂಜಿ ಉತ್ಸಾಹದಿಂದ ಸ್ವಾಗತಿಸುತ್ತಾಳೆ.

ಈಗ ತಾನೇ ಮುಗಿದ 2019 ಅಪರಂಜಿಯ ಪಾಲಿಗೆ ಒಂದು ಮಹತ್ವದ ವರ್ಷ. ವರ್ಷದ ಆರಂಭದಲ್ಲಿ ಮುಂದಿನ ಹಾದಿ ಏನೋ ಎಂತೋ ಅಂತ ಆತಂಕ ಪಡುತ್ತಿದ್ದಾಗ, ಇನ್ನೂರಕ್ಕೂ ಹೆಚ್ಚು ದಾನಿಗಳು ಅವಳ ನೆರವಿಗೆ ಬಂದು, ಅವಳು ಕನಸು ಮನಸಿನಲ್ಲೂ ನೆನೆಸದ ಆರ್ಥಿಕ ಸುಭದ್ರತೆಯನ್ನು ಒದಗಿಸಿಕೊಟ್ಟದ್ದನ್ನು ಅವಳು ಎಂದಿಗೂ ಮರೆಯುವಂತಿಲ್ಲ.

ಆ ವರ್ಷ ನಾವು ಹೊರತಂದ ನಾಲ್ಕೂ ವಿಶೇಷಾಂಕಗಳನ್ನೂ ಓದುಗರು ತುಂಬಾ ಮೆಚ್ಚುಗೆಯಿಂದ ಸ್ವಾಗತಿಸಿದ್ದು, ಒಂದು ಸಂತಸದ ಸಂಗತಿ. ಫೆಬ್ರವರಿಯಲ್ಲಿ ನಾವು ಹೊರತಂದ ಸೋಷಿಯಲ್ ಮೀಡಿಯಾ ಸಂಚಿಕೆ, ಯುಗಾದಿ ವಿಶೇಷಾಂಕವಾಗಿ ಹೊರಬಂದ ಏಪ್ರಿಲ್ ಸಂಚಿಕೆ ಇವುಗಳೇ ಅಲ್ಲದೇ ಅಕ್ಟೋಬರಿನಲ್ಲಿ 'ಹಗಲೇ ಎಲ್ಲಾ, ರಾತ್ರಿ ಇಲ್ಲ' ಎಂಬ ಥೀಮಿನಲ್ಲಿ ಮೇಲೆ ಮೂಡಿಬಂದ ವಿಶೇಷಾಂಕ ಮತ್ತು ಪರಿಸರ ರಕ್ಷಣೆಗಾಗಿ ಮೀಸಲಿಟ್ಟ ಡಿಸೆಂಬರಿನ ವಿಶೇಷಾಂಕ ಇವೆಲ್ಲವೂ ಬಹುಮಟ್ಟಿಗೆ ಯಶಸ್ವೀ ಪ್ರಯತ್ನಗಳಾದವು.

ಈ ತಿಂಗಳ ಸಂಚಿಕೆಯಲ್ಲಿ, ತಮ್ಮ 'ಅಪರಂಜಿ ಪಲಾಯನ ಠುಸ್' ಎಂಬ ಲೇಖನದ ಮೂಲಕ ಅಪರಂಜಿಗೆ ಹಿಂದಿನಿಂದ ಬರೆಯುತ್ತಿದ್ದ ಶ್ರೀಮತಿ ಬಿ.ಎಸ್. ಶೈಲಜಾ ಅವರು ಪುನಃ ನಮ್ಮ ಬರಹಗಾರ ಬಳಗವನ್ನು ಸೇರಿದ್ದಾರೆ. ತಮ್ಮ 'ಚೌಕಾಸಿ' ಎಂಬ ಲೇಖನ ಮೂಲಕ ಶ್ರೀಮತಿ ಶೈಲಜಾ ಅವರು ಮೇ 1990 ರಲ್ಲಿ ನಮ್ಮ ಲೇಖಕ ಲೇಖಕಿಯರ ಬಳಗವನ್ನು ಸೇರಿದರು. ಆಗಿಂದ ಅವರು ಅಪರಂಜಿಗೆ ಅನೇಕ ಲೇಖನಗಳಗಳನ್ನು ನೀಡಿದ್ದಾರೆ. ವೃತ್ತಿಯಲ್ಲಿ ಖಗೋಳ ಶಾಸ್ತ್ರ ಪರಿಣತೆಯಾಗಿದ್ದು, ನೆಹರೂ ತಾರಾಲಯದ ನಿರ್ದೇಶಕಿಯಾಗಿದ್ದ ಶೈಲಜಾ ಅವರು ಜನಪ್ರಿಯ ವಿಜ್ಞಾನದ ಅದರಲ್ಲೂ ಖಗೋಳ ಶಾಸ್ತ್ರದ ಮೇಲೆ ಅನೇಕ ಪುಸ್ತಕಗಳನ್ನು ರಚಿಸಿದ್ದಾರೆ. ಅವರು ತಮ್ಮ ಲೇಖನದಲ್ಲಿ ಪ್ರಸ್ತಾಪಿಸಿರುವ ವಿಷಯವನ್ನು 'ಎ ಪಾಯಿಂಟ್ ವೆಲ್ ಟೇಕನ್' ಎನ್ನಬಹುದು. ಶ್ರೀಮತಿಯವರ ವಿಜ್ಞಾನ ಲೇಪನದ ನಗೆ ಲೇಖನಗಳು ನಿಜಕ್ಕೂ ಜನಪ್ರಿಯ. ಅಂತಹ ಲೇಖನಗಳು ಮುಂದಿನ ದಿನಗಳಲ್ಲಿ ಅಪರಂಜಿಗೂ ದೊರಕುವಂತಾಗಲಿ.

ಹೊಸವರ್ಷವನ್ನು ನಮ್ಮ ಬರಹಗಾರರು ತಮ್ಮದೇ ಆದ ವಿಶೇಷ ರೀತಿಯಲ್ಲಿ ಸ್ವಾಗತಿಸಿ ನಮಗೆಲ್ಲಾ ಮುದ ನೀಡಲು ಅಣಿಯಾಗಿದ್ದಾರೆ. ನಾವೀಗ ಅಡಿಯಿಟ್ಟಿರುವ ಹೊಸ ವರ್ಷ ಎಲ್ಲರಿಗೂ ಸುಖ, ಶಾಂತಿಗಳನ್ನು ನೀಡಲಿ ಎಂಬುದೇ ಅಪರಂಜಿಯ ಹಾರೈಕೆ.

ಅಪರಂಜಿ ಬಳಗದ ಎಲ್ಲರಿಗೂ ಹೊಸವರ್ಷದ ಶುಭಾಶಯಗಳು.

■

# ಶ್ರದ್ಧಾಂಜಲಿ

**'ಗಣನಾಯಕಾಯ ಗಣದೈವಕಾಯ, ಗಣಾಧ್ಯಕ್ಷಾಯ ಧೀಮಹಿ'**



**ಶ್ರೀ ವಿ.ಆರ್. ನಾಥ್**

ಅಪರಂಜಿಯ ಪ್ರಾರಂಭದ ವರ್ಷದಲ್ಲಿ ಅದರ ಮುದ್ರಣದ ಜವಾಬ್ದಾರಿಯನ್ನು ವಹಿಸಿಕೊಂಡು ಆಗಿಂದಲೂ ಅವ್ಯಾಹತವಾಗಿ ಮುದ್ರಣ, ವಿತರಣೆಗಳ ಕೆಲಸವನ್ನು ಅಚ್ಚುಕಟ್ಟಾಗಿ ಪ್ರತಿತಿಂಗಳೂ ವಹಿಸಿಕೊಂಡು ಬರುತ್ತಿದ್ದ ಸಜ್ಜನ ಮಿತ್ರ **ವಿ.ಆರ್. ನಾಥ್** ಇನ್ನಿಲ್ಲ. ಮೂವತ್ತೈದು ವರ್ಷಗಳ ಮಧುರ ಸೇಹವನ್ನು ನೀಡಿದ ನಾಥ್ ಅಪರಂಜಿಯ ಪಾಲಿಗೆ ಒಬ್ಬ ಗಾಡ್ ಫಾದರ್ ಎಂದೇ ಹೇಳಹುದು. ಅಪರಂಜಿಯ ಮುದ್ರಕರೇ ಅಲ್ಲದೇ ನಮ್ಮ ಟ್ರಸ್ಟಿಯೂ ಆಗಿದ್ದ ನಾಥ್, ಹಿಂದಿನ ವರ್ಷಗಳಲ್ಲಿ ನಾವು ಬಹು ಯಶಸ್ವಿಯಾಗಿ ನಡೆಸುತ್ತಿದ್ದ ಹಾಸ್ಯೋತ್ಸವಗಳನ್ನು ರೂಪಿಸುವ ಕಾರ್ಯವೂ ಸೇರಿದಂತೆ ನಮ್ಮ ಎಲ್ಲ ಚಟುವಟಿಕೆಗಳಲ್ಲೂ ಬಹು ಪ್ರಮುಖ ಪಾತ್ರವನ್ನು ವಹಿಸಿದ್ದರು.

ಎಂಭತ್ತನಾಲ್ಕನೆಯ ಇಸವಿಯಲ್ಲಿ ಅಪರಂಜಿಯನ್ನು ಬೆಂಗಳೂರಿನಲ್ಲೇ ಮುದ್ರಿಸಲು ನಿರ್ಧರಿಸಿದಾಗ, ನಾಥ್ ಅವರ ಮುದ್ರಣಾಲಯ ರವಿ ಗ್ರಾಫಿಕ್ಸ್‌ಗೆ ನಾನು ಹೋಗಿದ್ದೆ. ಆಗ ಆ ಮುದ್ರಣಾಲಯ ಮಲ್ಲೇಶ್ವರದ ಸಂಪಿಗೆ ರಸ್ತೆಯಲ್ಲಿ ಇತ್ತು. ಅಚ್ಚು ಮೊಳೆಗಳನ್ನು ಜೋಡಿಸುವ ಕಾಲವದು. 'ಪತ್ರಿಕೆ ಕರಾರುವಾಕ್ಕಾಗಿ ಒಂದನೆಯ ತಾರೀಖೇ ಅಂಚೆಗೆ ಹೋಗಬೇಕು, ಬರಹಗಳನ್ನು ಕೊಡಲು ಅಂತಿಮ ದಿನ ಯಾವುದು?' ಅಂತ ನಾನು ಅವರನ್ನು ಪ್ರಶ್ನಿಸಿದಾಗ ಅವರು, ಬರಹಗಳು ಬಂದಂತೆ ನನಗೆ ತಲುಪಿಸಿಬಿಡಿ, ಕರಡು ಸಿದ್ಧವಾದಂತೆ ನಿಮಗೆ ತಿದ್ದಲು ಕಳುಹಿಸುವೆ' ಅಂತ ಬಹು ಸಹಜವಾಗಿ ಹೇಳಿದರು. ಆ ದಿನಗಳಲ್ಲಿ

ನಾನು ನನ್ನ ಬಿಡುವಿಲ್ಲದ ವೃತ್ತಿ ಜೀವನದಲ್ಲಿ ಮುಳುಗಿರುತ್ತಿದ್ದೆ. ತಿಂಗಳು ಪೂರ್ತಿ ಕರಡು ತಿದ್ದುತ್ತಿದ್ದರೆ ನನ್ನ ವೃತ್ತಿಗೇ ಇತಿಶ್ರೀ ಹಾಡಬೇಕಾಗಿರುತ್ತಿತ್ತು. 'ಅದೆಲ್ಲಾ ಪ್ರಾಕ್ಟಿಕಲ್ ಆಗೊಲ್ಲ ನಾಥ್. ಇಪ್ಪತ್ತನೇ ತಾರೀಖು ನಿಮ್ಮ ಮುದ್ರಣಾಲಯಕ್ಕೆ ಬಂದು ಕೂಡುತ್ತೇನೆ. ಕರಡು ತಿದ್ದುವ ಕೆಲಸವನ್ನು ಇಲ್ಲೇ ಮುಗಿಸಿ ಹೊರಡುವೆ. ಪತ್ರಿಕೆ ತಿಂಗಳ ಮೊದಲನೇ ತಾರೀಖಿಗೆ ಕೊಡುವ ಜವಾಬ್ದಾರಿ ನಿಮ್ಮದು' ಅಂತ ನಗುತ್ತಲೇ ಹೇಳಿದೆ. ಅವರು ಮರುಮಾತನಾಡದೇ ಒಪ್ಪಿಕೊಂಡು ಅಂತೆಯೇ ನಡೆದುಕೊಂಡರು. ನಾವು ಕೊಟ್ಟ ಎಲ್ಲ ತೊಂದರೆಗಳನ್ನೂ ನಗುನಗುತ್ತಲೇ ಸ್ವೀಕರಿಸಿ ಅಪರಂಜಿಯ ವಹಿವಾಟಿಗೆ ಒಂದು ಸ್ಥಿರತೆಯನ್ನು ಒದಗಿಸಿಕೊಟ್ಟವರು ನಾಥ್.

ನಾನು ನಾಥ್‌ರವರ ಸಂಪಿಗೆ ರಸ್ತೆಯ ಮುದ್ರಣಾಲಯಕ್ಕೆ ಕರಡು ತಿದ್ದಲು ಹೋಗುತ್ತಿದ್ದ ದಿನಗಳಲ್ಲಿ ಎಂಟನೇ ಕ್ರಾಸಿನಲ್ಲಿರುವ ಜನತಾ ಹೋಟೆಲ್ಲಿಗೆ ಕಾಫಿಕುಡಿಯಲು ಹೋಗುತ್ತಿದ್ದೆವು. ಮೊನ್ನೆ ಅಪರಂಜಿಯ ಮೂಲಧನವನ್ನು ಡಿಪಾಸಿಟ್ ಮಾಡುವ ಸಂದರ್ಭದಲ್ಲಿ ಎಂಟನೇ ಕ್ರಾಸಿಗೆ ಹೋಗಬೇಕಾಯಿತು. ಹಳೆಯ ದಿನಗಳ ನೆನಪಿಗೆಂದು  ಜನತಾ ಹೋಟೆಲ್ಲಿಗೆ ಹೋಗೋಣವೆಂದು ನಾಥ್‌ರವರೇ ಸೂಚಿಸಿದರು. ನಮ್ಮ ಹೊಸ ಯುವ ಮ್ಯಾನೇಜಿಂಗ್ ಟ್ರಸ್ಟಿ ಉಲ್ಲಾಸ್, ನಾಥ್ ಮತ್ತು ನಾನು ಆ ಸಂಜೆ ಅಲ್ಲಿಗೆ ಹೋಗಿ ಉಪಹಾರ ಸೇವಿಸಿದ ನಂತರ ಹೊರಡುವಾಗ, ನಮ್ಮ  ಮೂವತ್ತೈದು ವರ್ಷಗಳ ನಂತರದ ಹೋಟೆಲ್ ಭೇಟಿಯ ಬಗ್ಗೆ ಕೇಳಿಸಿಕೊಂಡ ಅಲ್ಲಿದ್ದ ಹಿರಿಯರೊಬ್ಬರು ನಮ್ಮ ಫೋಟೋ ತೆಗೆದದ್ದೇ ಅಲ್ಲದೇ, ಇನ್ನೂ ಮೂವತ್ತೈದು ವರ್ಷಗಳು ಹೀಗೇ ಬರುತ್ತಿರಿ ಅಂತ ಹಾರೈಸಿದರು. ಅಂದಿನಿಂದ ಮೂವತ್ತೈದು ದಿನಗಳಿಗೂ ಮುಂಚೆಯೇ ನಾಥ್ ಆ ಮೋಹನಮುರುಳಿಯ ನಾಡಿಗೆ ತೆರಳುತ್ತಾರೆಂದು ನಾವು ಖಂಡಿತ ಭಾವಿಸಿರಲಿಲ್ಲ.


ನಾಥ್‌ರವರ ಮೊಬೈಲಿನ ರಿಂಗ್ ಟೋನ್ ವಿಶಿಷ್ಟವಾಗಿತ್ತು. ಅದೊಂದು ಗಣಪತಿ ಸ್ತೋತ್ರ. ಬಹು ಇಂಪಾಗಿದ್ದ "ಗಣನಾಯಕಾಯ ಗಣದೈವಕಾಯ, ಗಣಾಧ್ಯಕ್ಷಾಯ ಧೀಮಹಿ" ಸಾಲುಗಳನ್ನು ಕೇಳುವುದೇ ಒಂದು ಸೊಬಗು. ಅವರು ಫೋನ್ ರಿಸೀವ್ ಮಾಡಿದಾಗಲೆಲ್ಲಾ, 'ಅಯ್ಯೋ, ಆ ರಿಂಗ್ ಟೋನೇ ಇರಲಿ ಬಿಡಿ, ಕೇಳುಕ್ಕೆ ಇಂಪಾಗಿದೆ, ನೀವು ಯಾಕೆ ಕಾಲ್ ರಿಸೀವ್ ಮಾಡಿ ರಸಭಂಗ ಮಾಡ್ತೀರಾ?' ಅಂತ ನಾನು ತಮಾಷೆ ಮಾಡುತ್ತಿದ್ದೆ.

ಅವರ ಪ್ರೀತಿಯ ಶ್ರೀ ಗಣಪತಿಯು ಅವರ ಕುಟುಂಬಕ್ಕೆ ಈ ಅಗಲುವಿಕೆಯನ್ನು ಭರಿಸುವ ಶಕ್ತಿಯನ್ನು ಕೊಡಲಿ ಎಂದು ಅಪರಂಜಿ ಅಶ್ರುಭರಿತಳಾಗಿ ಪ್ರಾರ್ಥಿಸುತ್ತಾಳೆ.

# ಶರಲೇಖನ ಸಾಹಸಗಳು – ಭಾಗ 2

**ಲೇಖಕರು : ಎಂ. ಶಿವಕುಮಾರ್. ಪ್ರಕಾಶನ : ತೇಜು ಪಬ್ಲೀಕೇಶನ್ಸ್**

● **ಕೃಷ್ಣ ಸುಬ್ಬರಾವ್**




ವತ್ಸನನ ಕಣ್ಣು ತಪ್ಪಿಸಿ ಗುಪ್ತವಾಗಿ ಶರಲೇಖನನ್ನು ಭೇಟಿ ಮಾಡಿ ಕೇಸೊಂದನ್ನು ಕೊಡುವ ಹರಸಾಹಸ ಮಾಡಿದೆ. ನಾನು ಖ್ಯಾತನಾಮ ಪತ್ತೆದಾರನಿಗೆ ಕೊಟ್ಟ ಕೇಸ್ ಯಾವುದೆಂದರೆ ಹಾಸ್ಯವನ್ನೇ ಸೀರೀಯಸ್ಸಾಗಿ ತೆಗೆದುಕೊಂಡ ಒಬ್ಬ ಇಂಜಿನಿಯರ್ ಪತ್ತೆದಾರಿ ಹಿಡಿದಿದ್ದು ಹೇಗೆ ಮತ್ತು ಯಾಕೆ ? ಎಂಬ ವಿಚಾರ. ಮಾಮೂಲಿನಂತೆ ಶರಲೇಖ ಜಂಬದಿಂದ ಬೀಗುತ್ತ ಇಟ್ ಇಸ್ ವೆರಿ ಸಿಂಪಲ್, ಆಶ್ಚರ್ಯ ಪಡುವಂತದ್ದೇನಿದೆ ಇದರಲ್ಲಿ ಎಂದು ಶುರು ಹಚ್ಚಿಕೊಂಡ.

ಹಾಸ್ಯಕ್ಕೂ ಪತ್ತೇದಾರಿಗೂ ಯುಗಗಳಿಂದಲೇ ಅವಿನಾಭಾವ ಸಂಬಂಧವಿದೆ. ಎರಡು ಕ್ಷೇತ್ರದಲ್ಲಿಯೂ ಅನಿರೀಕ್ಷಿತ ತಿರುವುಗಳೇ ಬಂಡವಾಳ. ಎಷ್ಟು ಬೇಕೋ ಅಷ್ಟನ್ನು, ಎಲ್ಲಿ ಹೇಳ್ಬೇಕೋ ಅಲ್ಲಿ ಹೇಳಿ ಶಿಸ್ತನ್ನು ಕಾಪಾಡಿಕೊಳ್ಳಬೇಕು. ಕೊನೆಯಲ್ಲೊಂದು ಆಸ್ಫೋಟ ವಿರಬೇಕು. ಕಥೆ ಚೆನ್ನಾಗಿದೆ ಎಂದು ಮತ್ತೆ ಓದುವ ತವಕ ಪತ್ತೆದಾರಿ ಕಥೆಗಳಿಗೆ ಇರೋದಿಲ್ಲ, ಕಾರಣ ಕೊಲೆಗಾರ, ಕಳ್ಳ, ಮೋಸಗಾರ, ಯಾರೆಂದು ತಿಳಿದ ಮೇಲೆ ಸ್ವಾರಸ್ಯವೆಲ್ಲಿ ಉಳಿಯುತ್ತದೆ. ಹಾಸ್ಯದಲ್ಲಿ ಜೋಕ್ ಎರಡನೇ ಸಲ ಹೇಳಿದಾಗ ನಗುವವರು ಯಾರು? ಆದರೂ ಕೆಲವು ಅಪವಾದಗಳಿರುತ್ತದೆ.

ಕೆಲವರಿಗೆ ವಿಶೇಷ ಶಕ್ತಿಯಿರುತ್ತದೆ. ನಿರೂಪಣೆ ಚಾತುರ್ಯದಲ್ಲಿ ಓದುಗರನ್ನು ಹಿಡಿದಿಟ್ಟುಕೊಳ್ಳುತ್ತಾರೆ. ಹೀಗಾಗಿ 'ಅಪರಂಜಿ' ಯಲ್ಲಿ ಓದಿದ್ದನ್ನೇ ಮತ್ತೆ ಪುಸ್ತಕದ ರೂಪದಲ್ಲಿ ಶರಲೇಖನ ಸಾಹಸಗಳನ್ನು(ಎರಡನೇ ಭಾಗ) ಓದಿದೆ. ಶರಲೇಖನ ವಿಶ್ವರೂಪ ದರ್ಶನ ವಾಯಿತು. ಒಬ್ಬ ಗಾರುಡಿಗನಾಗಿ, ವಿಜ್ಞಾನಿಯಾಗಿ, ಚರಿತ್ರಕಾರನಾಗಿ, ಸೈಕ್ರಿಯಾಟಿಕ್ ವೈದ್ಯನಾಗಿ, ಹಿಪ್ನಾಟಿಕ್ ಪರಿಣಿತನಾಗಿ ಕಾಣುತ್ತಾನೆ. ವೈದ್ಯ ನಾಗಿ ರೋಗದ ಮೂಲವನ್ನು ಕಂಡು ಹಿಡಿಯಲಾಗದೆ ಪತ್ತೆದಾರಿ ಕಾರ್ಯಕ್ಕೆ ಇಳಿದ ಡಾ. ಎಂ. ಶಿವರಾಂ ಜ್ಞಾಪಕಕ್ಕೆ ಬರುತ್ತಾರೆ. ಹೆಂಡತಿಯ ಮಂಡಿ ನೋವು, ಗಂಡನ ಕದಿಯುವ ಗೀಳಿನಿಂದ ಎಂಬ ಅಂಶವನ್ನು 'ಮನೋನಂದನ' ದಲ್ಲಿ ತಿಳಿಸುತ್ತಾರೆ. ಅವರ ಸುಪುತ್ರ ಶಿವಕುಮಾರ್ ಶರಲೇಖನ ಬೆನ್ನಿಗೆ ಬಿದ್ದಿದ್ದು ಕಾಕತಾಳೀಯವಲ್ಲ.

ನಡಿಯುತ್ತಿರುವ ವಿದ್ಯಾಮಾನಗಳಾದ ಟ್ರಸ್ಟ್ ವೋಟು, ರೆಸಾರ್ಟ್ ರಾಜಕೀಯ ಇಂದ್ರ ಲೋಕಕ್ಕೂ ತಲುಪಿರುವುದನ್ನು ದೇವತಾ ಪ್ರಭುತ್ವದಲ್ಲಿ ಕಾಣಬಹುದು. ಶರಲೇಖನಿಗೆ

ಅರ್ಜುನನ ಫೋಕಸ್ ಇದ್ದರೂ ಅಕ್ಕ ಪಕ್ಕದಲ್ಲಿ ನಡೆಯುತ್ತಿರುವುದನ್ನು ಗಮನಿಸುತ್ತಲೆ ಗುರಿ ಸಾಧನೆ ಮಾಡುವ ಚಮತ್ಕಾರವಿದೆ. ವೇಗದಷ್ಟೇ ಸಂಯಮ ಮುಖ್ಯವೆನ್ನುವುದನ್ನು ಸಕ್ಸಸ್ ರೇಟಿನಿಂದ ಶರಲೇಖ ಸಾಬೀತುಪಡಿಸುತ್ತಾನೆ.

ವಿಜ್ಞಾನದ ಹೊಸ ಆವಿಷ್ಕಾರಗಳು ಅನೇಕ ಪ್ರಸಂಗಗಳಲ್ಲಿ ಲಭ್ಯ. ಇನ್ಸ್ಪೆಕ್ಟರ್ ಉಳ್ಳಾಗಡ್ಡಿ ಗೌರಿ ಬಿದನೂರಿಗೆ ಹೋಗಿದ್ದು ಶರಲೇಖ ಕಂಡು ಹಿಡಿದ್ದದ್ದು ಐ ಫೋನಿನ ಹೊಸ ಆಪ್ ಮೂಲಕ. ಯಾರಾದರು 'ನಾಟ್ ರೀಚಬಲ್' ಆಗಿದ್ದರೆ, ಅವರಿರುವ ಸ್ಥಳವನ್ನು ಗೂಗಲ್ನಲ್ಲಿ ತಿಳಿಯಬಹುದೆಂಬ ಮಾಹಿತಿ ಕೊಡುತ್ತಾರೆ.

ದೊಡ್ಡ ದೊಡ್ಡ ಪ್ರಾಜೆಕ್ಟ್ ಗಳಿಗೆ ಅಡ್ಡವಾಗುವ ದೇವಿಗಳು, ದೇವಸ್ಥಾನಗಳು ಎಲ್ಲಾ ಶರಲೇಖನ ಕಾರ್ಯವ್ಯಾಪ್ತಿಗೆ ಬರುತ್ತದೆ. ಉಕ್ಕಿನ ಸೇತುವೆಗೆ ಅಡ್ಡಿಯಾಗಿ ಪಟೋಲಮ್ಮ ವಿಗ್ರಹ ಎದ್ದು ನಿಲ್ಲುತ್ತದೆ. 'ಪಟೋಲಮ್ಮ' ಯಾರು ಎಂದು ಗಾಬರಿಯಾಗಬೇಡಿ. ಪಾಟ್ ಹೋಲ್‌ನಲ್ಲಿ ಪ್ರತ್ಯಕ್ಷವಾದ ದೇವತೆ. ಜನರ ಬಾಯಿಗೆ ಸಿಕ್ಕಿ ಪಟೋಲಮ್ಮ ಆಗಿದ್ದಾಳೆ.

ಯಾರನ್ನಾದರೂ ಶರಲೇಖನಿಗೆ ಪರಿಚಯ ಮಾಡಿಸಿದರೆ ಅವರ ಜಾತಕವನ್ನೇ ಕ್ಷಣದಲ್ಲಿ ಜಾಲಾಡುವ ಜಾಣ್ಮೆ ಅವನಿಗಿದೆ. ರಂಗಶಂಕರದಲ್ಲಿ ಮಳೆ ಬರುತ್ತಿದ್ದಾಗ ಸೊಗಸಾದ ಅಕ್ಕಿ ರೊಟ್ಟಿ ಮತ್ತು ಎರಡು ರೀತಿಯ ಚಟ್ನಿ ಸವಿಯುವ ಸಂದರ್ಭದಲ್ಲಿ ಸ್ನೇಹಿತನ ಮಗಳು ಸುಧಾಳನ್ನು ಪರಿಚಯಿಸಿದಾಗ ಹಾಂಕಾಂಗ್‌ನಿಂದ ಬಂದಿದ್ದು ಯಾವಾಗ ಎಂದು ಕೇಳಿ ಆಶ್ಚರ್ಯ ಪಡಿಸುತ್ತಾನೆ.ಕಾರಣ ಕೇಳಿದಾಗ ಬೀದಿಯ ದೀಪದ ಬೆಳಕಿನಲ್ಲಿ ಹಕ್ಕಿ ಜ್ವರ ಹರಡದಂತೆ ಹಾಂಕಾಂಗ್ನಲ್ಲಿ ಹಾಕಿದ ಮುದ್ರೆ ಅಲ್ಟ್ರಾ ವೈಲೆಟ್ ಬೆಳಕಿನಲ್ಲಿ ಮಾತ್ರ ಕಾಣಿಸಿತು. ಅದು ಸುಧಾಳ ತೋಳಿನಮೇಲಿದ್ದ ವಿಚಾರ ತಿಳಿಸುತ್ತಾನೆ.

ಕ್ಯಾಂಬೋಡಿಯಾಕ್ಕೆ, ಸಿಂಗಪುರಕ್ಕೆ ಕರೆದುಕೊಂಡು ಹೋಗುವ ಹಾಗೆ ವಿದುರಾಶ್ವತ್ಥಕ್ಕೂ ಲೇಖಕರು ನಮ್ಮನ್ನು ಕರೆದೊಯ್ಯುತ್ತಾರೆ. ಅನೇಕ ಚಾರಿತ್ರಿಕ ಸ್ಥಳಗಳು ಮತ್ತು ಅದರ ಸ್ಥಳ ಪುರಾಣಗಳು ವಿಶ್ಲೇಷಣಗಳೊಂದಿಗೆ ದೊರೆಯುತ್ತದೆ. ದೊಡ್ಡ ಜಾತ್ರೆಗಳ ಪರಿಚಯವು ಆಗುತ್ತದೆ. ಒಟ್ಟಿನಲ್ಲಿ ಎನ್ಸ್ ಸೈಕ್ಲೋಪಿಡಿಯಾ ಓದಿದ ಅನುಭವ. ಶರಲೇಖನ ಸಾಹಸದ ಮೂರನೇ ಸಂಪುಟ ನಿರೀಕ್ಷಿಸುತ್ತಾ ಸರೋಜಮ್ಮ ಮಾಡಿಕೊಡಬಹುದಾದ ಅಕ್ಕಿ ರೊಟ್ಟಿಗಾಗಿ ಕಾಯುತ್ತಾ ಸೋಫಾದಲ್ಲಿ ವಿರಮಿಸುತ್ತೇನೆ.


ಪ್ರತಿಗಳಿಗಾಗಿ ಸಂಪರ್ಕಿಸಿ:

**ತೇಜು ಪಬ್ಲಿಕೇಶನ್ಸ್,**

**1014, 24ನೇ ಮುಖ್ಯ ರಸ್ತೆ, 16ನೇ ಕ್ರಾಸ್,**

**ಬಿ.ಎಸ್.ಕೆ. 2ನೇ ಹಂತ,**

**ಬೆಂಗಳೂರು – 560 070.**

anakuramanath@gmail.com, Whatsapp : 9448050463

# ಅಪರಂಜಿಯ ಪಲಾಯನ ಠುಸ್??

**● ಬಿ ಎಸ್ ಶೈಲಜಾ**

ಆ ದಿನ ಅಕಸ್ಮತ್ತಾಗಿ ತುರಹಳ್ಳಿ ಕಾಡಿನ ಪಕ್ಕದ 'ಗೇಟೆಡ್' ಊರೊಳಗೆ ಮಂಗಗಳ ಹಿಂಡು ದಾಳಿ ಇಟ್ಟುಬಿಟ್ಟಿತು. ಬಾಲವಿಲ್ಲದ ಮಂಗಗಳೆಲ್ಲಾ ಅತ್ಯುತ್ಸಾಹದಿಂದ ಇವುಗಳ ಸುತ್ತ ಜಮಾಯಿಸಿ ತಮ್ಮ ಸಾಮರ್ಥ್ಯ ಪ್ರದರ್ಶನ ನಡೆಸಿದವು. ಸೆಲ್ಫೋನ್‌ಗಳು ಕ್ಲಿಕ್ಕಿದ್ದೇ ಕ್ಲಿಕ್ಕಿದ್ದು. ಮಂಗಗಳಿಗೆ ತಿನ್ನಲು ಏನೂ ಸಿಗಲೇ ಇಲ್ಲ. ಅವುಗಳಿಗೆ ಬ್ರೆಡ್ ಬಿಸ್ಕತ್ ರುಚಿ ಹತ್ತಲಿಲ್ಲ. ಎಲ್ಲ ಮನೆಗಳಿಗೂ ಎರಡೆರಡು ಕಿಟಕಿಗಳ ಬಂದೋಬಸ್ತು ಆದದ್ದರಿಂದ ಕಿಟಕಿಯಲ್ಲಿ ಕಂಡ ಹಣ್ಣು ಕನಸಿನ ಗಂಟೇ ಆಗಿತ್ತು.

ಇನ್ನು ಮೇಲೆ ಈ ಕಡೆ ಬರಲೇ ಬಾರದುಎಂದು ಅವುಗಳಿಗೆ ಜ್ಞಾನೋದಯವಾಗಿ ಕಾಡಿಗೆ ಹಿಂದಿರುಗುತ್ತಿದ್ದ ಹಾಗೆ ಕಾಡಿನಲ್ಲಿ ಯಾರೋ ಹೆಣ್ಣು ಮಗಳು ಗೊಳೋ ಎಂದು ಅಳುತ್ತಿರುವ ಶಬ್ದ ಕೇಳಿತು. ರಾಣಿ ಮಂಗಮ್ಮನಿಗೆ ಕರುಳು ಚುರುಕ್ಕೆಂದಿತು. ತನ್ನ ಕನ್ನಡಜ್ಞಾನವನ್ನು ಉಪಯೋಗಿಸಿಯೇ ಬಿಟ್ಟಳು.

'ಯಾರಮ್ಮಾ ನೀನು? ಯಾಕೆ ಅಳುತ್ತೀ?'

'ನಮ್ಮಮ್ಮ ಬೇಕು; ಕಾಡಿಗೆ ಹೋಗಿಬಿಟ್ಟಿದಾಳೆ ಅಂತ ಹೇಳಿದ್ರು ಹುಡುಕ್ಕೊಂಡು ಬಂದೆ'

'ಅದ್ಯಾಕೆ ನಿಮ್ಮಮ್ಮಕಾಡಿಗೆ ಬಂದಳು?ನೋಡೋಕೆ ಹೇಗಿದ್ದಾಳೆ?'

'ನನ್ನ ಹಾಗೆ ಇದ್ದಳಂತೆ; ಊಟ ಇಲ್ದೆ ಹೊಟ್ಟೆಪಾಡಿಗೆ ಬಂದಳಂತೆ'

'ನೀನು ಯಾರು?'

'ನಾನು ಅಪರಂಜಿ'

'ಇದೆಂತದೋ ಹೆಸರು ನಾನು ಕೇಳಿಲ್ಲ; ಗಂಗಮ್ಮ ತುಂಗಮ್ಮ ಇವ್ರೆಲ್ಲಾ ಗೊತ್ತು; ಎಮ್ಮೆ ಹುಡಿಕ್ಕೊಂಡು ಬರ್ತಿರ್ತಾರೆ. ಅದುಸರಿ, ಇಷ್ಟು ದಿನಾ ಅಲ್ಲಿ ಸಂತೋಷವಾಗಿದ್ದೋಳು ಈಗ್ಯಾಕೆ ಬಂದೆ?'

'ಬಾಳ ಬೇಜಾರಾಗೋಯ್ತು'

'ಅದ್ಯಾಕೆ?'

'ಪ್ರತಿ ತಿಂಗ್ಳೂ ಹೊಟ್ಟೇ ತುಂಬಾ ನಗೋಕ್ಕೆ ಊಟ ಕೊಡೋರು; ಈ ತಿಂಗ್ಳು ಕೊಡ್ಲೇ ಇಲ್ಲ.'

'ಏನೋ ಗೊತ್ತಾಗೋಲ್ಲಮ್ಮ ತಿಂಗಳಿಗೆ ಒಂದೇ ಊಟವೇ? ಸ್ವಲ್ಪ ಬಿಡಿಸಿ ಹೇಳು'

'ಅದೇನೋ ಪರಿಸರ ಪರಿಸರ ಅಂತ ಎಲ್ಲಾರದೂ ಗಲಾಟೆ. ದೀಪಾವಳಿ ಪಟಾಕಿ ಹೊಡೀಲಿಲ್ಲವಂತೆ; ಪಕ್ಕದ ಮನೆಯವರುಕಾರು ಬಿಟ್ಟುಕೊಂಡು ಹೋಗುವಾಗ

ಧೂಳೆಬ್ಬಿಸುತ್ತಾರಂತೆ. ಪ್ಲಾಸ್ಟಿಕ್ ಕಸ ಹಾಕ್ತಾರಂತೆ ಹೀಗೆ ಏನೇನೋ.'

'ನಿನಗೇನು ತೊಂದರೆಆಯ್ತು?'

'ನನ್ನ ಊಟಾನೇ ನಗು – ಇವ್ರೆಲ್ಲಾ ಹೀಗೆ ಅಳ್ತಾ ಕೂತ್ಕೊಂಡ್ರು. ನಾನು ಬಂದ್ಬುಟ್ಟೆ. ನಮ್ಮಪ್ಪ ಆಗ್ಲೇ ಪಂಚಭೂತ ಲೀನವಾಗೋದು ಅಂತೆಲ್ಲಾ ಮಾತಾಡ್ತೀದಾರೆ. ನನಗ್ಯಾರು ದಿಕ್ಕು?'

'ಅಪ್ಪ ಹೋದ್ರೆ ಚಿಕ್ಕಪ್ಪ ಇಲ್ವೇ?'

'ಅವ್ರಿಗೂ ಪರಿಸರ ಕಾಯಿಲೆ ಬಂದುಬಿಟ್ಟಿದೆ. ಇಂತಾ ಚುನಾವಣೆ ಟೈಮಲ್ಲೂ ನನ್ನ ಊಟಕ್ಕೆ ಖೋತಾ ಮಾಡಿ ಉಪದೇಶದ ಔಷ್ದ ಕುಡಿಸಿದಾರೆ. ಅವ್ರ ಫ್ರೆಂಡುಗಳು ಎಲ್ರೂ ಹಾಗೆನೇ ಮಾತಾಡ್ತಾರೆ. ಅಲ್ಲೆಲ್ಲೋ ಡೆಲ್ಲಿಲಿ ಹೊಗೆ ಸುತ್ಕೊಂಡಿದೆಯಂತೆ– ಯಾರೋ ಬೆಂಕಿ ಹಾಕಿದಾರಂತೆ. ಅವ್ರನ್ನ ಬಯ್ಯದು ಬಿಟ್ಟು ಹನುಮಂತ ಮಾಡಿದ್ದೂಅದೇ, ನರ ನಾರಾಯಣರೂ ಕಾಡನ್ನೇ ಸುಟ್ಟು ಹಾಕಿದ್ರು ಅಂತ ಸಮಜಾಯಿಷಿ ಕೊಟ್ಕೊಂಡು ಸಿಗರೇಟ್ ನಮ್ಮ ಚಿಕ್ಕ ಕಾಂಟ್ರಿಬ್ಯೂಷನ್ ಅಂತಾರೆ. ಇನ್ನೊಬ್ರು ಫ್ರೆಂಡುಬಾಳೆ ಎಲೆ, ತೆಂಗಿನಜುಂಗು, ಬೇವಿನ ಕಡ್ಡಿ ಎಲ್ಲಾ ತಿರ್ಗಾ ಉಪಯೋಗ್ಸೋಕೆ ಶುರು ಮಾಡ್ತಾರಂತೆ'

'ಅದೆಲ್ಲ ಬೇಕು ಅಂತ ನಮ್ಮ ಕಾಡಿಗೇ ನುಗ್ಗುತಾರೆ ಅಯ್ಯೋಯ್ಯೋ ಯಾರದ್ದಿದು ಐಡಿಯಾ?'

'ಅದ್ಯಾರೋ ಅಜ್ಜಿ; ಇನ್ನೊಂದು ಅಜ್ಜಿ ನೀರನ್ನ ಒಂದುತೊಟ್ಟೂ ಬಿಡದ ಹಾಗೆ ಮನೇಲೆ ತುಂಬಿಸಿ ಇಟ್ಟುಕೊಳ್ಳೊ ಪ್ಲಾನ್ ಹಾಕಿದಾರೆ.'

'ಕೆಟ್ಟ ಮೇಲೆ ಬುದ್ದಿ ಬಂತು ಸದ್ಯ. ಈ ಕಾಡಲ್ಲಿ ಗುಂಡಿ ತೋಡ್ತೀನಿ ಅಂತ ಬರದೇ ಇದ್ರ ಸಾಕು'

'ಇನ್ನೊಬ್ರ ಅಮ್ಮ ಮನೆ ತುಂಬಾ ಗಿಡ ಬೆಳೆಸ್ತಾರಂತೆ'"

'ಎಂತಗಿಡ? ನಮ್ಮನ್ನ ಕೇಳಿದ್ರೆ ಒಳ್ಳೇ ಸಲಹೆ ಕೊಡ್ತೀವಿ. ಎಲ್ಲೋ ಫಾರಿನ್ನಿಂದ ಎಂತೆಂತದೋ ಗಿಡತಂದು ಹಾಕ್ಬಿಡ್ತಾರೆ. ರುಚಿಇಲ್ಲ; ಪಚಿ ಇಲ್ಲ. ಹೋಗ್ಲಿ ಇವ್ರಾದರೂ ಭಾವಿ ನೀರು ಸೇದುತ್ತಾರಾ? ಅಥವಾ ಪಂಪು ಹಾಕಿ ತಣ್ಣಗೆ ಕೂತು ಬಿಡುತ್ತಾರೋ?'

'ಇನ್ನೊಬ್ರು ಅಮ್ಮ– ಟೀಚರ್ ಆಗಿ ರಿಟೈರ್ಆದ್ರೂ ಮಕ್ಕಳನ್ನ ಗದರಿಸೋದು ಬಿಟ್ಟಿಲ್ಲ – ಪಾಪ ಅವು ರಸ್ತೆಲೀ ಬರ್ತ್‌ಡೇ ಪಾರ್ಟಿ ಮಾಡ್ಕೊಂಡವಂತೆ; ಕಸ ಹಾಕಿದ್ರು ಅಂತ ಬೈದು ಕಳಿಸಿದಾರೆ.'

'ಅಯ್ಯೋ ನಮ್ಮನ್ನ ಕರೆಸಿದ್ದರೆ ಸಾಕಾಗಿತ್ತು. ಮುಂಚೆನೇ ನಾವು ಬಂದು ಬಿಟ್ಟಿದ್ದರೆ ಪಾರ್ಟಿ ಮಾಡದೇ ಓಡ್ಹೋಗಿರೋರು. ಆಮೇಲೆ ಬಂದಿದ್ರೇ ನಾವು ಎಲ್ಲಾತಿಂದು ಖಾಲಿ ಮಾಡ್ತಿದ್ವು.'

'ನೀವು ಇಲ್ಲಿ ಕಾಡಲ್ಲಿ ಕೂತಿದ್ದೀರಲ್ಲ'

‘ಅವ್ರಿಗೆ ಇನ್ಮೇಲೆ ಕಾಡಲ್ಲೇ ಪಾರ್ಟಿ ಮಾಡಕ್ಕೆ ಹೇಳಿದ್ರೆ ಸಾಕಾಗಿತ್ತು. ಇಲ್ದಿದ್ರೇ ನಮ್ಮ್ ಶತ್ರುಗಳು ಇದ್ದಾರಲ್ಲ ಅವ್ರನ್ನ ಕರ್ಸಿದ್ರೆ ಆಗ್ತಿತ್ತು.’

‘ಯಾರಪ್ಪಾ ಅವ್ರು?’

‘ಅವರದ್ದೊಂದು ಭಾರೀ ಗ್ಯಾಂಗು – ನೀವೆಲ್ಲ ಅವ್ರನ್ನ ಡೊಂಕು ಬಾಲದ ನಾಯಕರು ಅಂತ ಮರ್ಯಾದೆಯಾಗಿ ಕರೀತೀರಿ. ನಮ್ಮನ್ನ ಮಾತ್ರ ಮಂಗ್ಯಾ ಅಂತೀರಿ’

‘ಇಲ್ಲಪ್ಪಾ ಈಗ ನಿಮಗೆ ಹೊಸಾ ಬಿರುದು ಕೊಟ್ಟದಾರೆ ಪ್ರೈಮೇಟು ಅಂತ’

‘ಏನು ಹಾಗಂದ್ರೆ? ಯಾರು ಕೊಟ್ಟವರು?’

‘ಅವರು ದೊಡ್ಮನುಷ್ಯರು – ಗಾಂಪರ ಗುರುಗಳು. ಪ್ರೈಮೇಟುಗಳು ಅಂದರೆ ನಮಗೆ ಅಂದರೆ ಮನುಷ್ಯರಿಗೆ ಅಲ್ದೇ ನಿಮಗೆ ಎಲ್ಲರಿಗೂ ಹಿರಿಯರಂತೆ’

‘ಆಹಾ ಬಲೇ ದೊಡ್ಮನುಷ್ಯರು. ನಮ್ಮನ್ನೂ ನಿಮ್ಮ ಗುಂಪಿಗೆ ಸೇರಿಸ್ಕೊಂಡು ಬಿಟ್ಟಿದಾರೆ. ನಾವೇನು ನಿಮ್ ತರಾ ಒಲೆ ಉರಿಸ್ತಿವಾ? ಹೊಗೆ ಹಾಕ್ತಿವಾ? ಕಾರಲ್ಲಿ ಓಡಾಡ್ತೀವಾ? ಓಟು ಹಾಕಿ ಅಂತ ಕೇಳ್ತೀವಾ?’

‘ವೋಟು ಕೇಳೊಕ್ಕೆ ಪ್ಲಾನು ಏನು ಗೊತ್ತಾ? ಕೆರೆ ಕಟ್ಟಿಸೋದಂತೆ’

‘ನಾನು ಆಗ್಻ೇ ಅಂದ್ಕೊಂಡೆ. ನಿಮ್ಮ ತರಲೆ ಜನಗಳಿಗೆ ನಮ್ಮ ಕಾಡು ಕಣ್ಣುಕುಕ್ಕತ್ತೇ ಅಂತ. ಇಲ್ಲಿ ಕಾಡು ಕತ್ತರಿಸಿ ಗುಂಡಿ ಮಾಡ್ತೀನಿ ಅಂತ ಪ್ಲಾನ್ ಹಾಕಿರಬೇಕು. ಈ ಎಲ್ಲ ಪ್ಲಾನು ಅಜ್ಜಿಗಳದ್ದೇನಾ? ಅಜ್ಜಗಳು ಏನ್ಮಾಡ್ತಿದಾರೆ? ಅವ್ರಿಗೆ ಪರಿಸರ ಬೇಕಿಲ್ಲವಂತಾ?’

‘ಜಾಮೂನ್ ತಿಂತಾ ಕೂತಿದಾರೆ. ಅದ್ಯಾರೋ ಒಬ್ರು ಅಮೆರಿಕಾದಲ್ಲಿರೋ ಹುಡುಗಂಗೆ ಯಾವ್ದಾದ್ರೂ ಹಿಡಿಂಬಿನಾ ತಗಲು ಹಾಕೋಣ ಅಂತ ಓಡಾಡ್ತಿದಾರೆ.’

‘ಹಿಡಿಂಬಿ ನಮ್ಮ ಪೈಕಿಯವಳು; ಆ ಅಮ್ರಿಕಾ ಹೈದನ್ನ ಯಾಕೆ ಮದುವೆ ಮಾಡ್ಕೋತಾಳೆ ಅಂತ ಕೇಳು. ಹಾಗೇ ಆ ಲಾಲ್ ಬಾಗೂ ಕಬ್ಬನ್ ಪಾರ್ಕ್‌ನ್ನ ನಮಗೇ ಬಿಟ್ಟುಕೊಡಕ್ಕೆ ನಿಮ್ಮ ಅಜ್ಜಂದ್ರಿಗೆ ಹೇಳು. ಸುಮ್ಮನೆ ತಿಂತಾ ಕೂತಿರೋದೇ ಆಯ್ತು ಅವ್ರಿಗೆ. ನೀನೂ ಅಳುಮುಂಜಿಯಾಗಿ ಬಿಟ್ಟರೆ ಏನು ಗತಿ? ಅವ್ರನ್ನ ಕೇಳೊರು ಯಾರು?’

ಅಪರಂಜಿ ‘ಇದೇನಪ್ಪಾ ಹೊಸ ಜವಾಬ್ದಾರಿ!’ ಅಂತ ಕಣ್ಣುಕಣ್ಣುಬಿಟ್ಟಳು.

ರಾಣಿ ಮಂಗಮ್ಮ ಬಿಟ್ಟಾಳೆಯೇ? ನಡಿ ನಡಿ ಅಂತ ಅಪರಂಜಿಯನ್ನು ಎಳೆದುಕೊಂಡು ಹೋಗಿ ಗ್ರೀನ್ ಲೈನ್ ಮೆಟ್ರೋ ಹತ್ತಿಸಿ ಮಲ್ಲೇಶ್ವರಕ್ಕೆ ಕಳಿಸಿಯೇ ಬಿಟ್ಟಳು. ■

**ಟೂರಿಸ್ಟ್ ಕೋಚ್‌ನಲ್ಲಿ ಗೈಡ್:** ಕೈಗೆ ಮೆಹಂದಿ ಹಚ್ಕೊಂಡಿರುವವರು ಹಿಂದುಗಡೆ ಕೂತ್ಕೊಳ್ಳಿ. ತಲೆಗೆ ಮೆಹಂದಿ ಹಚ್ಕೊಂಡಿರುವವರು ಮುಂದುಗಡೆ ಕೂತ್ಕೊಳ್ಳಿ.

# ಹೊಸ ವರ್ಷ – ಹೊಸ ಚಿಂತನೆ!

● ಗಣೇಶ್ ಹೆಗ್ಗಡೆ

ಅಪರಂಜಿಯ ಸಹೃದಯ ಅಭಿಮಾನಿಗಳಿಗೆ ಹೊಸ ವರ್ಷದ ಹಾರ್ದಿಕ ಶುಭಾಶಯಗಳು. ಇದು ನನ್ನ 370ನೆಯ ಆರ್ಟಿಕಲ್. ಅಕಸ್ಮಾತ್ ಮೋದಿ–ಷಾದ್ವಯರ ಕಣ್ಣು ಇದರ ಮೇಲೆ ಬಿದ್ದು ಅವರು ತರಾತುರಿಯಿಂದ ಇದನ್ನು ವಾಪಸ್ ಪಡೆಯುವ ಮುನ್ನ ದಯವಿಟ್ಟು ಓದಿ ಬಿಡಿ. ಪ್ರಸಕ್ತ ಹೊಸ ವರ್ಷದ ಆರಂಭದಲ್ಲಿ ದೇಶದ ಪ್ರಜೆಗಳು ತಮ್ಮ ಮೊಬೈಲ್‌ನಲ್ಲಿ ಹರಿ ಬಿಡುವ ಶುಭಾಶಯಗಳ ಸಂದೇಶಗಳು ಹೀಗೂ ಇರಬಹುದೇ? ಎಂಬ ನನ್ನ ಸ್ವಂತ ಚಿಂತನೆಗಳನ್ನೊಳಗೊಂಡಿರುವುದೇ ಈ ಲೇಖನದ ಸಾರಾಂಶ.

**ಸಂದೇಶ – ಒಂದು**

ಪ್ರಸಕ್ತ ಹೊಸ ವರ್ಷದಲ್ಲಾದರೂ ನೆಚ್ಚಿನ ಪ್ರಧಾನಿಗಳ ಭವ್ಯ ಕನಸು ನನಸಾಗಲಿ. ದೇಶದಲ್ಲಿ ಬಯಲು ಶೌಚಾಲಯಗಳು ಮುಕ್ತಿಗೊಂಡು ಎಲ್ಲೆಲ್ಲೂ ಮೊಬೈಲ್ ಶೌಚಾಲಯಗಳು ರಾರಾಜಿಸಲಿ. ಜೈ ಡಿಜಟಲೀಕರಣ ಯುಗ.

**ಸಂದೇಶ – ಎರಡು**

ವಾಯು ಮಾಲಿನ್ಯ ಪರಾಕಾಷ್ಠೆಯಲ್ಲಿದ್ದರೂ ನವದೆಹಲಿಯನ್ನು ಇನ್ನೂ ತೊರೆಯದ ಭಂಡ ಜನತೆಗೆ ಮುಖ್ಯಮಂತ್ರಿ ಅರವಿಂದ ಕ್ರೇಜೀವಾಲರು ಹೊಸ ವರ್ಷದ ಶುಭಾಶಯ ಕೋರಿದ್ದಾರೆ. ಪರಸ್ಪರ ರಸ್ತೆಯಲ್ಲಿ ಅಭಿಮುಖಿಯಾದರೂ ದಟ್ಟ ಹೊಗೆಯ ಕಾರಣದಿಂದ ಪರಿಚಿತರನ್ನು ಗುರುತು ಹಿಡಿದು ಮಾತನಾಡಿಸಲು ಹೆಣಗುತ್ತಿರುವ ಜನತೆಯಲ್ಲಿ ಅವರ ಕ್ಷಮೆ ಕೋರಿದ್ದಾರೆ. ಆದ್ದರಿಂದ ಮುಂಬರುವ ವರ್ಷದಲ್ಲಿ ಜನತೆಗೆ ಶಿರಸ್ತ್ರಾಣ ಮತ್ತು ಹೆಡ್‌ಲ್ಯಾಂಪ್‌ನ್ನು ಉಚಿತವಾಗಿ ಹಂಚುವ ವ್ಯವಸ್ಥೆಯನ್ನು ಜಾರಿಗೆ ತರಲು ಗಂಭೀರವಾಗಿ ಚಿಂತಿಸಿದ್ದಾರೆ.

**ಸಂದೇಶ – ಮೂರು**

ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಎಂ. ಡಿ. ಯವರು ಎಲ್ಲಾ ಪ್ರಯಾಣಿಕರಿಗೆ ಹೊಸ ವರ್ಷದ ಶುಭ ಕೋರಿದ್ದಾರೆ. ಈ ಸುಸಂದರ್ಭದಲ್ಲಿ ಒಂದು ಸಿಹಿ ಸುದ್ದಿಯನ್ನು ಬಿಡುಗಡೆ ಮಾಡಲು ಅವರು ಇಚ್ಛಿಸಿದ್ದಾರೆ. ನೆರೆ ರಾಜ್ಯ ಮಹಾರಾಷ್ಟ್ರದಲ್ಲಿರುವಂತೆ ಇನ್ನು ಮುಂದೆ ಕರ್ನಾಟಕದಲ್ಲಿಯೂ ಹೊಸ ವರ್ಷದಿಂದ ರಾತ್ರಿ ಪ್ರಯಾಣದ ಬಸ್ಸುಗಳಿಗೆ 'ಗವರ್ನರ್' ವ್ಯವಸ್ಥೆ ಮಾಡಲಾಗುತ್ತದೆ. ಈ ಗವರ್ನರ್ ವ್ಯವಸ್ಥೆ ಪ್ರತಿ ಮುಂಜಾನೆ 5.27 ರವರೆಗೂ ಕಾರ್ಯ ನಿರ್ವಹಿಸುವಂತೆ ದೆಹಲಿಯ ಓಟೊ ಮೊಬೈಲ್ ಸಂಸ್ಥೆಯ ಟೈಮರ್ ಉಪಕರಣವನ್ನು ಪ್ರತಿ ಬಸ್ಸಿನಲ್ಲೂ ಅಳವಡಿಸಲಾಗಿದೆ ಎಂಬುದನ್ನು ಸಹ ತಿಳಿಸಲು ಸಂತಸಪಡುತ್ತಾರೆ.

**ಸಂದೇಶ – ನಾಲ್ಕು**

ರಾಜ್ಯದ ಸಮಗ್ರ ಜನತೆಗೆ ರಾಜ್ಯದ ಸನ್ಮಾನ್ಯ ಅಬಕಾರಿ ಸಚಿವರು ಹೊಸ ವರ್ಷದ

ಶುಭಾಶಯಗಳನ್ನು ಕೋರುತ್ತಿದ್ದಾರೆ. ಮನೆ-ಮನೆಗೂ ಎಣ್ಣೆ ಎಂಬ ಅದ್ಭುತ ಯೋಜನೆಗೆ (ಪಾನಾಸಕ್ತರನ್ನು ಹೊರತುಪಡಿಸಿ) ತೀವ್ರ ವಿರೋಧ ವ್ಯಕ್ತವಾದರೂ ಎದೆಗುಂದದೆ ಅವರು ಈಗ, ಇಂದಿರಾ ಕ್ಯಾಂಟೀನು ಮಾದರಿಯಂತೆ ಮದಿರಾ ಕ್ಯಾಂಟೀನುಗಳನ್ನು ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ತೆರೆಯುವ ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. ಇತ್ತೀಚೆಗೆ ಉತ್ತರ ಕರ್ನಾಟಕದಲ್ಲಿ ಪ್ರವಾಸ ಮಾಡಿ ಅಲ್ಲಿನ ಬಾರ್ ಪರಿಸ್ಥಿತಿಯ ಬಗ್ಗೆ ಮತ್ತು ಜನರ ಸಂಕಷ್ಟಗಳ ಬಗ್ಗೆ ತೀವ್ರ ಅಧ್ಯಯನ ನಡೆಸಿ ರಾಜಧಾನಿಗೆ ವಾಪಸ್ಸು ಬಂದಿದ್ದಾರೆ.

**ಸಂದೇಶ – ಐದು**

ಕೆ.ಪಿ.ಟಿ.ಸಿ.ಎಲ್ ಕಂಪೆನಿಯ ಎಂಡಿಯವರು ರಾಜ್ಯದ ನಾಲ್ಕು ಕೋಟಿ ವಿದ್ಯುಚ್ಛಕ್ತಿ ಗ್ರಾಹಕರಿಗೆ ಹೊಸ ವರ್ಷದ ಶುಭ ಕೋರಿದ್ದಾರೆ. ರಾಜ್ಯದಲ್ಲಿ ಭ್ರಷ್ಟಾಚಾರ ನಿರ್ಮೂಲನೆಯ ನಿಟ್ಟಿನಲ್ಲಿ ತಮ್ಮ ಸಂಸ್ಥೆಯೂ ಕೈ ಜೋಡಿಸಿ, ಪ್ರಸಕ್ತ ಹೊಸ ವರ್ಷದಿಂದ ಪ್ರಾಥಮಿಕವಾಗಿ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ 'ಸ್ಮಾರ್ಟ್‌ಗ್ರೀಡ್'! ಮಾಪಕಗಳನ್ನು ಅಳವಡಿಸಲು ಉದ್ದೇಶಿಸಿದ್ದಾರೆ. ಈ ಎಲೆಕ್ಟ್ರಾನಿಕ್ ಮಾಪಕಗಳ ಟೆಕ್ನಿಕ್ಯಾಲಿಟಿಯನ್ನು ಬಹಿರಂಗ ಪಡಿಸದ ಎಂಡಿಯವರು ಈ ಮಾಪಕಗಳು ವಿದ್ಯುತ್ ಲೋಡುಗಳ ಮ್ಯಾಕ್ಸಿಮಂ ಡಿಮ್ಯಾಂಡ್ ಜತೆಗೆ ಕಛೇರಿಯಲ್ಲಿ ಸರ್ಕಾರಿ ಅಧಿಕಾರಿಗಳ ಮ್ಯಾಕಿಮಂಡಿಮ್ಯಾಂಡನ್ನೂ ಸಹಿತ ರೆಕಾರ್ಡ್ ಮಾಡುವ ವ್ಯವಸ್ಥೆಯಿದೆ ಎಂದು ಯಾಕೊ ಸೂಚ್ಯವಾಗಿ ಬಹಿರಂಗಪಡಿಸಿದ್ದಾರೆ.

**ಸಂದೇಶ – ಆರು**

ಕರ್ನಾಟಕ ರಾಜ್ಯದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ಉತ್ಸಾಹಿ ಹಾಗೂ ಪ್ರಾಮಾಣಿಕ ಸಚಿವರು ರಾಜ್ಯದ ಸಮಗ್ರ ಜನತೆಗೆ ಹೊಸ ವರ್ಷದ ಶುಭ ಕೋರಿದ್ದಾರೆ. ಸಚಿವರಾದ ಪ್ರಥಮ ದಿನದಿಂದಲೆ ನಾಡಿನ ಉದ್ದಗಲಕ್ಕೂ ಸಂಚರಿಸಿ, ಎಲೆಲ್ಲೊ ಮಲಗಿ, ಸರ್ಕಾರಿ ಶಾಲೆಗಳ ದಯನೀಯ ಸ್ಥಿತಿಯನ್ನು ಕಣ್ಣಾರೆ ಕಂಡು ತೀವ್ರ ಮರುಗಿದ್ದಾರೆ. ಸರ್ಕಾರಿ ಶಾಲೆಗಳಲ್ಲಿನ ಶಿಕ್ಷಕರ ಕೊರತೆಯನ್ನು ಗಂಭೀರವಾಗಿ ಪರಿಗಣಿಸಿರುವ ಅವರು ತಾತ್ಕಾಲಿಕವಾಗಿ ಅಂಥಹ ಸ್ಥಳಗಳಲ್ಲಿ ರೋಬೋಟ್ ಯಂತ್ರಗಳನ್ನು ಶಿಕ್ಷಕ ವೃತ್ತಿಗೆ ಅಳವಡಿಸಿಕೊಳ್ಳಲು ತೀವ್ರ ಚಿಂತನೆ ನಡೆಸಿದ್ದಾರೆ. ಈ ರೋಬೋಟ್ ಯಂತ್ರ ಶಿಕ್ಷಕರು ಪ್ರೈವೇಟ್ ಟ್ಯೂಷನ್ ಮಾಡುತ್ತಾರೆಯೇ? ಎಂಬ ಸಾವಿರಾರು ಪೋಷಕರ ಪತ್ರಗಳು ಈಗಾಗಲೇ ಅವರ ಕಚೇರಿಗೆ ತಲುಪಿವೆ. ರಾಕೆಟ್ ಪ್ರಿಯ ವಿದ್ಯಾರ್ಥಿಗಳಿಗಂತೂ ಇಂಥಹ ಶಿಕ್ಷಣದ ಬಗ್ಗೆ ಬೇಸರ ಬರುವುದು ಸಹಜವಾಗಿದೆ.

**ಸಂದೇಶ – ಏಳು**

ಸನ್ಮಾನ್ಯ ಮುಖ್ಯಮಂತ್ರಿಯವರು ರಾಜ್ಯದ ಆರು ಕೋಟಿ ಜನತೆಗೆ ಹೊಸ ವರ್ಷದ ಶುಭಕೋರಿದ್ದಾರೆ. ಕಳೆದ ವರ್ಷ ಬರ ಹಾಗೂ ನೆರೆ ಸಂದರ್ಭಗಳಲ್ಲಿ ನಾಡಿನ ಜನತೆಯ ಬವಣೆ ಮತ್ತು ನಿಸ್ಸಹಾಯಕತೆಗೆ ಅವರು ತೀವ್ರ ನೊಂದುಕೊಂಡಿದ್ದಾರೆ. ಇದನ್ನು ಗಮನಿಸಿ ಪ್ರಸಕ್ತ ಹೊಸ ವರ್ಷದಿಂದ ಕೆಲವು ಜನಪರ ಕಾರ್ಯಕ್ರಮಗಳನ್ನು ತಮ್ಮ ಸರ್ಕಾರ ಅಧಿಕಾರದಲ್ಲಿದ್ದರೆ ಹಮ್ಮಿಕೊಳ್ಳುವುದೆಂದು ಯಾರ ನೆರವಿಗೂ ಕೈ ಚಾಚದ ಬಡ ಜನತೆಗೆ ಆಶ್ವಾಸನೆಯಿತ್ತಿದ್ದಾರೆ. ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿ ಬರ-

ನೆರೆ ಪರಿಸ್ಥಿತಿಗಳಲ್ಲಿ ಸ್ವತಃ ಪ್ರಜೆಗಳೇ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಸಾಧ್ಯವಾಗುವಂತೆ ಪೂರಕವಾಗಿ ನುರಿತವರಿಂದ ಟ್ರೈನಿಂಗ್ ಸೆಂಟರುಗಳನ್ನು ನಡೆಸಲಾಗುವುದು ಎಂದು ನಾಡಿನ ಜನತೆಗೆ ಅವರು ಅಭಯವನ್ನು ನೀಡಿದ್ದಾರೆ.

**ಸಂದೇಶ – ಎಂಟು**

ಅರ್ಹರಾಗುವ ಕನಸು ಹೊತ್ತಿರುವ ಎಲ್ಲಾ ಅನರ್ಹ ಶಾಸಕರು ತಮ್ಮ ತಾಲ್ಲೂಕಿನ ಬಡ ಮತದಾರರಿಗೆ ಹೊಸ ವರ್ಷದ ಶುಭಕೋರಿದ್ದಾರೆ. ದೇವನೊಬ್ಬ ನಾಮ ಹಲವು ಎಂಬ ನಾಣ್ನುಡಿಯಂತೆ, 'ಶಾಸಕನೊಬ್ಬ, ಪಕ್ಷಗಳು ಹಲವು' ಎಂಬ ತಮ್ಮ ಸೈದ್ಧಾಂತಿಕ ಹೋರಾಟಕ್ಕೆ ಎಲ್ಲರ ಬೆಂಬಲವಿರಲಿ ಎಂದು ಅವರು ಮನವಿ ಮಾಡಿದ್ದಾರೆ.

**ಸಂದೇಶ – ಒಂಭತ್ತು**

ದೇಶದ ಎಲ್ಲಾ ಸೀನಿಯರ್ ಸಿಟಿಜನ್‌ಗಳಿಗೆ ಹೊಸ ವರ್ಷದ ಶುಭವನ್ನು ಸ್ವಾಮಿ ಸತ್ಯಾನಂದ ಕೋರಿದ್ದಾರೆ. ಅಕಸ್ಮಾತ್ ಕೈಲಾಸ ವಾಸಿಯಾಗುವ ಕರೆ ಬಂದರೆ ಧೃತಿ ಪಡಬ್ಯಾಡಿ. ಅದು ಕೈಲಾಸ ರಾಷ್ಟ್ರವಾಸಿಯಾಗುವ ಕರೆಯೂ ಇದ್ದೀತು ಎಂದು ನೊಂದ ಮನಗಳಲ್ಲಿ ಆಸೆ ಚಿಗುರಿಸಿದ್ದಾರೆ.

– ಜೈ ಹಿಂದ್...ಜೈ ಮುಂದ್... ■

**ಡಿಸೆಂಬರ್ ಹದಿನೈದು ಬಂದರೆ...** *ಕೃಪೆ : ವಿಶ್ವವಾಣಿ*

ಡಿಸೆಂಬರ್ ಹದಿನೈದರ ನಂತರ ಬಹುತೇಕ ಮಂದಿಗೆ ಒಂದು ರೀತಿಯ ವಿಚಿತ್ರ ಮನಸ್ಥಿತಿ ಆವರಿಸುತ್ತದಂತೆ. ಅದು ಸುಮಾರು ಇಪ್ಪತ್ತೈದು ದಿನಗಳ ಕಾಲ ಅಂದರೆ ಜನವರಿ ಐದರ ತನಕ ಇರುತ್ತದಂತೆ. ನಂತರ ಕ್ರಮೇಣ ಆ ಮನಸ್ಥಿತಿ ಮಾಯವಾಗುವುದಂತೆ. ಆ ಮನಸ್ಥಿತಿಗೆ ಇಂಥದೇ ಎಂಬ ಹೆಸರಿಲ್ಲ ಅಥವಾ ಇನ್ನೂ ತನಕ ಯಾರೂ ನಾಮಕರಣ ಮಾಡಿಲ್ಲ. ಅದು ಎಂಥ ಮನಸ್ಥಿತಿ ಅಂದರೆ...

**ಜನೆವರಿ ಒಂದರಿಂದ ಹೊಸ ವ್ಯಕ್ತಿಯಾಗಬೇಕು.**

**ಇನ್ನು ಹದಿನೈದು ದಿನ ಸಕತ್ ಗುಂಡು ಹಾಕಬೇಕು, ಆನಂತರ ಅದನ್ನು ಬಿಟ್ಟುಬಿಡಬೇಕು.**

**ಇನ್ನು ಹದಿನೈದು ದಿನ ಮಾತ್ರ ಸಿಗರೇಟು ಸೇದೋದು. ನಂತರ ಅದನ್ನು ತುಟಿಗೆ ತಾಗಿಸುವುದಿಲ್ಲ.**

**ಜನೆವರಿ ಒಂದರಿಂದ ಜಿಮ್‌ಗೆ ಹೋಗುತ್ತೇನೆ. ಅಲ್ಲಿ ತನಕ ಚೆನ್ನಾಗಿ ತಿನ್ನಬೇಕು. ನಂತರ ಫುಲ್ ಡಯಟ್.**

**ಜನೆವರಿ ಒಂದರಿಂದ ನಿತ್ಯವೂ ದಿನಚರಿ ಬರೆಯಬೇಕು, ಬೆಳಗ್ಗೆ ಎದ್ದು ವಾಕಿಂಗ್ ಹೋಗಬೇಕು, ಸಂಗೀತ ಕಲಿಯಬೇಕು, ತಬಲಾ ಕ್ಲಾಸಿಗೆ ಹೋಗಬೇಕು, ಇತ್ಯಾದಿ**

ಆದರೆ ಜನೆವರಿ ಐದು ಕಳೆಯುತ್ತಿದ್ದಂತೆ, ನಿಧಾನವಾಗಿ ಈ ಎಲ್ಲಾ ಗೊತ್ತುವಳಿಗಳು ಕರಗಲಾರಂಭಿಸುತ್ತವೆ. ಡಿಸೆಂಬರ್ ಹದಿನೈದರ ಮುಂಚಿನ ಮನಸ್ಥಿತಿ ಆವರಿಸಿಕೊಳ್ಳಲಾರಂಭಿಸುತ್ತದೆ. ಜನೆವರಿ ಇಪ್ಪತ್ತು ಬರುವುದರೊಳಗೆ, ಹಿಂದಿನ ವರ್ಷದ ಡಿಸೆಂಬರ್ ಆರಂಭದ ಮನಸ್ಥಿತಿಗೆ ಮರಳಿರುತ್ತಾರೆ. ಆದರೆ ಪ್ರತಿ ವರ್ಷ ಡಿಸೆಂಬರ್ ಹದಿನೈದು ಬರುತ್ತಿದ್ದಂತೆ, ಈ ರೀತಿ ಅನಿಸುವುದು ಮಾತ್ರ ಸುಳ್ಳಲ್ಲ.

# ನನ್ನ ಸ್ವಾತಂತ್ರ್ಯಹರಣದ ಪ್ರಸಂಗ...

● ಮಾಲತಿ ಮುದಕವಿ

"ರೀ.. ನಿಮಗ ಗೊತ್ತದ ಏನೂ..."

ನನ್ನಾಕೆಯ ಮಾತಿನ ಶೈಲಿನ ಹಿಂಗ. ನನಗ ಗೊತ್ತಿಲ್ಲದ ವಿಷಯ ಹೇಳಬೇಕಾದಾಗೆಲ್ಲಾ ಬಿ.ಎಡ್. ದಾಗ ಪಾಠಾ ಕೊಡೂವಾಗ ಮಕ್ಕಳ ಬಾಯಿಂದನ ಪಾಠದ ಬಗ್ಗೆ ಏನಾರೆ ಕ್ಲೂ ಹೊಂಡಸಿ ಆಮ್ಯಾಲೆ ಅದರ ವಿವರಾ ಕೊಡತಾರಲಾ ಅಗದೀ ಹಂಗ...

"ಇಲ್ಲಾ... ಏನಾತೂ.."

ಪತ್ರಿಕೆಯಲ್ಲಿ ಯಾವುದೋ ಇಂಟರೆಸ್ಟಿಂಗ್ ವಿಷಯಾ ಓದಲಿಕ್ಕತ್ತಿದ್ದ ನಾನು ಅನಿವಾರ್ಯವಾಗಿ, ಆಸಕ್ತಿ ಇರದೇದ್ದರೂ ಆಸಕ್ತಿ ಅದ ಅನ್ನೂ ಹಾಂಗ ನಟಿಸ್ಕೋತ ಕೇಳಿದೆ. ಇಲ್ಲದೇದ್ದರ ಮುಂದಾಗೋ ಅನಾಹುತಗೋಳಿಗೆ ಜವಾಬ್ದಾರಿ ಹೊರವ್ರ ಯಾರು?

"ಬಾಜೂ ಮನೀ ಜಯಶ್ರೀ ಇಲ್ಲರ್‍ಯಾ.. ಅಕಿ ದಿನಾ ಗಂಡನ ಜೋಡೀ ವಾಕಿಂಗ್ ಸುರೂ ಮಾಡ್ಯಾಳ... ಅದರಿಂದ ಮೈ ಇಳೀತದಂತ... ಡಯಾಬಿಟಿಸ್, ಬ್ಲಡ್ ಶುಗರ್ ಇವೆಲ್ಲಾ ಪ್ರಾಬ್ಲಮ್ ಬರಂಗಿಲ್ಲಂತ... "

"ಅದು ಗೊತ್ತದ... ಅದನ್ನ ಬಿಟ್ಟು ನಿನಗೇನು ಹೊಸಾ ವಿಷಯಾ ಕಂಡಹಿಡದೀ ಹೇಳ ನನಗ..."

ನಾ ಏನ ಕಂಡಹಿಡಿಯೂದು ಮಣ್ಣು.. ನಾವೂ ಮುಂಜಾನೆದ್ದು ಇನ್ನ ಮ್ಯಾಲೆ ವಾಕಿಂಗ್ ಸುರು ಮಾಡೂಣೇನೂ ಅಂತ ವಿಚಾರಾ..."

"ನಾವೂ ಯಾಕ? ನಾ ಅಂತೂ ಹೋಗೇ ಹೋಗತೇನಿ. ನೀ ಬರೂದಾದ್ರ ನನ್ನ ಜೋಡೀ ಬರಬಹುದು ಅಷ್ಟ.. ನಿನ್ನ ನಾ ಹಿಂದೂ ರಗಡ ಸರ್ತೆ ಕರದಕರದೇನಿ. ನೀನ 'ನಂಗ ಇಡೀ ದಿನಾ ರಗಡ ದುಡತಾ ಆಗೇ ಆಗಿರತದ.. ನಿಮ್ಮಂಗ ಖಾಲೀ ಕೂಡೂದಿಲ್ಲಾ... ನನ್ನ ದುಡತಾನ ನನಗ ವ್ಯಾಯಾಮಾ... ವಾಕಿಂಗು..' ಅಂತ ಹೇಳ್ತಿದ್ದೀ.."

ನನ್ನವಳಿಗೆ ತನ್ನ ತಪ್ಪುಗಳನ್ನು ಎತ್ತಿ ತೋರಿಸಹತ್ತಿದ್ರ ಭಾರೀ ಇರಸುಮುರಸ ಆಗತದ... ನಿಮ್ಮೆಲ್ಲಾರದೂ ಹೆಂಗ ನನಗ ಗೊತ್ತಿಲ್ಲಾ!

"ಈಗ್ಯಾಕ ಹಿಂದಿಂದೆಲ್ಲಾ? ಈಗಿಂದಷ್ಟ ಮಾತಾಡ್ರೀ.. ಈಗ ನಾ ಹೇಳೋದು ಕೇಳ್ರಿ.. ನಾ ನಾಳೆಯಿಂದ ಮುಂಜಾನೆದ್ದು ನಿಮ್ಮ ಜೋಡೀ ವಾಕಿಂಗ್ ಬರತೇನಿ.. ನನ್ನೂ ಲಗೂನ ಎಬ್ಬಸ್ರೀ.. ಅಷ್ಟ.. "

ಆಕೆ ಫರಮಾನು ಜಾರಿ ಮಾಡಿದ್ದಳು!

ಮಾರನೆಯ ದಿನ ಎಂದಿನಂತೆ ನಾನು 5 ಗಂಟೆಗೆ ಎದ್ದೆ. ಇವಳನ್ನು "ಏಯ್ ಬಾಯೀ..." (ಧಾರವಾಡ, ಬೆಳಗಾಂವ್ ಕಡೇಯವ್ರು ಹೆಂಡತಿನ್ನ ಹಿಂಗನ ಕರೀತಾರ) ಅಂತ ಎಬ್ಬಸಲಿಕ್ಕತ್ತಿದೆ.

"ಛೇ.. ಏನ್ರೀ ನೀವು.. ಛೊಲೋತ್ನಾಗಿ ನಿದ್ದಿ ಸೈತ ಮಾಡಲಿಕ್ಕೆ ಬಿಡಂಗಿಲ್ಲಾ... "

ಕಿವಿತನಕಾ ರಗ್ಗು ಹೊದ್ದು ಮಲಗುತ್ತ ಹೇಳಿದ್ದಳು.

"ಅಲ್ಲಾ.. ನಿನ್ನೆ ನೀನ ಹೇಳಿ ಮಲಕೊಂಡೀ... ನಾಳಿನಿಂದ ವಾಕಿಂಗ್ ಬರತೇನಿ... ನನ್ನೂ ಲಗೂನ ಎಬ್ಬಸ್ರೀ ಅಂತ.. ನನಗೇನ ಹುಚ್ಚ ಹಿಡದದೇನ ಕೆದರಿ ಕ್ಯಾರ ಹಾಕ್ಕೋಳ್ಳಿಕ್ಕೆ..."

"ಅಯ್ಯ.. ಹೌದಲ್ಲಾ? ರೀ.. ಸಾರೀರೀ.. ನೀವು ಮದಲ ನಿಮ್ಮದೆಲ್ಲಾ ಮುಗಸ್ರೀ... ನಿಮ್ಮದು ಬ್ರಹ್ಮಶೌಚಾ... "

ಖರೇ ಹೇಳಬೇಕಂದ್ರ ಈ ಗಂಡಸರ ಜನ್ಮಾ ಅಂಬೂದು ಭಾಳ ಖೊಟ್ಟಿರೀ... ಮನೀಯೊಳಗ ಹೆಂಡಂದ್ರೀಗೆ ಇದರ ಮಾತಾಡಂಗಿಲ್ಲಾ... ಅವರು ಮಾಡಿ ಹಾಕಿದ್ದನ್ನ ಅಗದೀ ಹೊಸಾ ತರದ ಅಡಿಗೀ ಅನ್ನೂಹಂಗ ಬಾಯಿ ಚಪ್ಪರಿಸಿಕೊಂಡ ತಿನಬೇಕು... ಅವ್ರನ ಯಾವಾಗಲೂ ಹೊಗಳಬೇಕು... (ನಾ ನಿಮ್ಮ ನಿಮ್ಮ ಹೇಣ್ತಿನ್ನ ಅಂತ ಹೇಳೇನ್ರ್ಯಾ... ಮತ್ತ. ನೀವು ಹೆಂಗಸ್ರನ್ನ ಅಂತ ತಿಳ್ಕೊಂಡು ನಿಮ್ಮ ಬಾಜೂ ಮನಿಯವ್ರ ಹೆಂಡತಿನ್ನರೇ ಇಲ್ಲಾ ನಿಮ್ಮ ಅವ್ವನ್ನ ನಿಮ್ಮ ಹೇಣ್ತೀ ಮುಂದ, ನಿಮ್ಮ ಹೇಣ್ತಿನ್ನ ನಿಮ್ಮ ಅವ್ವನ ಮುಂದ ಹೊಗಳಿ ಗಿಗಳೀರಿ ಮತ್ತ... ಆಮ್ಯಾಲ ನಿಮ್ಮ ಪರಿಸ್ಥಿತೀ ಅಗಸರ ನಾಯೀ ಹಂಗ ಆಗತದ... ಧಡಾ ಹೊಳೀನೂ ಕಾಣಲಿಲ್ಲಾ... ಧಡಾ ಮನೀನೂ ಕಾಣಲಿಲ್ಲಾ... ಅನ್ನೋಹಂಗ) ಆಫೀಸಿನ್ಯಾಗ ಬಾಸಿನ ಮಾತು ಕೇಳಬೇಕು.. ಅವನ ಮುಂದ ಕವಲೆತ್ತಿನ್ಹಂಗ ಎಲ್ಲಾದಕ್ಕೂ ಗೋಣು ಅಲ್ಲಾಡಿಸಬೇಕೂ... ಅವನ ಡ್ರಮ್‌ನಂತಾ ಹೆಂಡ್ತೀನ ದೀಪಿಕಾ ಪಡುಕೋಣೆ ಅನಬೇಕು.. ಅವನ ಧಡ್ಡ ಮಕ್ಳನ್ನ ಸಿ.ವಿ. ರಾಮನ್ ಅನಬೇಕು. ಅಷ್ಟ ಯಾಕ, ಅವರ ಮನೀ ನಾಯೀಮರಿನ್ನ ಪ್ರಿನ್ಸ್ ಅನಬೇಕು... ! ಒಟ್ಟಿನ್ಯಾಗ ನಮಗ ಎಲ್ಲೂ ಅಭಿವ್ಯಕ್ತಿ ಸ್ವಾತಂತ್ರ್ಯ ಅನ್ನೂದನ ಇಲ್ಲಾ...

ಸ್ತ್ರೀಯರು ಅಬಲೆಯರು... ತುಳಿತಕ್ಕೊಳಗಾದವರು ಅಂತೆಲ್ಲಾ ಪೋಜ್ ಕೊಡತಾರಲ್ಲಾ... ನನಗಂತೂ ಇದು ಯಾವದೇ ರೀತಿಂದನೂ ಸರಿ ಅನಸಂಗಿಲ್ಲ ನೋಡ್ರಿ. ಪಾಪಾ... ಕೆಲವ್ರು ಇನ್ನೂ ತುಳಿತಕ್ಕೊಳಗಾಗತಿರಬಹುದು... ಅವರ ಬಗ್ಗೆ ನನಗ ಸಹಾನುಭೂತೀನೂ ಅದ. ಆದ್ರ ನಾ ಹೇಳತಿರೂದು ಬ್ಯಾರೆ ಒಂದು ಗುಂಪಿನ ವಿಷಯ... ಅವ್ರಿಗೆ ಸಮಾನತಾ ಬೇಕಂತ ಒಂದ ಕಡೇ ಹಾರಾಡತಾರ... ಸಭಾ, ಸತ್ಯಾಗ್ರಹಾ ಎಲ್ಲಾ ಮಾಡತಾರ... ಇನ್ನೊಂದ ಕಡೇ ಬಸ್ಸು, ಟ್ರೇನು ಎಲ್ಲಾ ಕಡೇ ರಿಜರ್ವೇಶನ್ ಬೇಕಂತಾರ. ಅವ್ರಿಗೆ ಎಲ್ಲಾ ಸಾರ್ವಜನಿಕ ಸ್ಥಳದಾಗ ಮಣೀನ ಹಾಕತಾರ.. ಸಿಟಿ ಬಸ್ಸಿನ್ಯಾಗ ಸೈತ ಅವರಿಗೆ ಯಾರರೆ ಎದ್ದು ಸೀಟು ಬಿಟ್ಟ ಕೊಡತಾರ... ಹೆಣ್ಣುಮಕ್ಕಳು.. ಪಾಪಾ.. ಅಂತ. ನಾವಾದ್ರ ಫುಟ್ ಬೋರ್ಡ ಮ್ಯಾಲೆ ನಿಂತೂ ಬರಬೇಕು ಒಮ್ಮೊಮ್ಮೆ...... ಬಸ್ಸಿನ್ಯಾಗ ಬೇಕಾದಷ್ಟ ಗದ್ದಲ ಇದ್ರೂ... ಯಾರರೆ ಹೆಂಗಸ್ರು, ಅವ್ರು ನಮಗಿಂತಾ ಐವತ್ತ ವರ್ಷ ದೊಡ್ಡವರರೆ ಇರವಲ್ಲರ‍್ಯಾಕ, ನಮಗಿಂತಾ ಐವತ್ತ ವರ್ಷ ಸಣ್ಣವ್ರರೆ ಇರವಲ್ಲರ‍್ಯಾಕ... ಅವ್ರಿಗೆ ನಮ್ಮ ಕೈಕಾಲು ಏನೂ ಹತ್ತದಂಗ ಅಗದೀ ಎಚ್ಚರಿಕಿಂದ ನಿಲ್ಲಬೇಕು. ಇಲ್ಲಂದ್ರ ನಿಮ್ಮ ಮರ‍್ಯಾದೀ ಕಳಕೊಳ್ಳಿಕ್ಕೆ ರೆಡೀ ಆಗಬೇಕು.

"ಅಯ್ಯ ಎಪ್ಪಾ... ಈಟ ವೈಸಾಗೇತೀ... ಬುದ್ಧೀ ಎಲ್ಲಿಟ್ಟೀದ್ಯೋ ತಮ್ಮಾ... ಮನ್ಯಾಗ ಅವ್ವಾ ಅಕ್ಕಾ ಯಾರೂ ಇಲ್ಲೇನ ನಿಂಗ? ಹಂಗ ಯಾಕ ಮೈಮ್ಯಾಲ ದ್ಯಾವ್ರು ಬಂದಾವ್ರಗತೇ ಜೋತಾಡಾಕತೀ...ತಗೀ ಅತ್ತಾಗ.."

ಅಂತ ಚೀರಾಡಿಬಿಡುತ್ತಾರೆ. ಯಾಕಂದ್ರ ನಾವು ಗಂಡಸ್ರು... ನಮಗ ಎಷ್ಟ ಬೈಸಿಕೊಂಡ್ರೂ ತಡಕೊಳ್ಳೋ ತಾಕತ್ತಿರತದಂತ ಎಲ್ಲಾರ ಸಮಝೂತು. ಅವ್ರು ಅಬಲೆಯರಂತ. ಅವ್ರು ಯಾವ ದೃಷ್ಟಿಯೊಳಗ ಅಬಲೆಯರು ಅಂತನ್ನೂದನ ನನಗ ಅರ್ಥ ಆಗವಲ್ಲದು. ಖರೇ ಹೇಳಬೇಕಂದ್ರ ಅವ್ರಿಗೆ ನಮಗಿಂತಾ 8 ಪಟ್ಟು ಹೆಚಿಗೀ ಶಕ್ತೀ ಇರತದ... ಇದನ ನಾ ಹೇಳಂಗಿಲ್ಲಾ... ವಿಜ್ಞಾನಿಗಳ ಹೇಳ್ಯಾರ... !!!

ಇನ್ನ ಆಫೀಸಿನಿಂದ ದಣದ ಮನೀಗೆ ಬಂದ್ರ ಒಂದ ಕಪ್ ಚಹಾ ನಸೀಬ ಆಗಬೇಕಂದ್ರ ಟಿವಿ ಮುಂದ ಧಾರಾವಾಹಿ ನೋಡಿಕೋತ ಕೂತ ಹೆಂಡ್ತಿಯಿಂದ ಸಹಸ್ರ ನಾಮಾವಳೀ ಕೇಳಬೇಕು... ಅದರಕಿಂತಾ ಮೊದಲ ನಾವು ಏನಂತೇವೀ ಅಂತನೂ ಹೇಳಬೇಕಲಾ... (ನೀ ಅರಾಮಿದ್ದೀ ನೋಡು... ಹೊಟ್ಯಾಗಿನ ನೀರ ಅಳ್ಳಾಡಧಂಗ.. ಯಾವಾಗಲೂ ಟೀವೀ ಮುಂದ ಕೂತಿರತೀ..)

"ಮುಂಜಾನಿಂದ ಮೂಗಿಗೆ ಕವಡೀ ಕಟಿಗೊಂಡ ದುಡಿಯೂದು ನಿಮ್ಮ ಕಣ್ಣಿಗೆ ಹೆಂಗ ಬಿದ್ದೀತು... ನಿಮ್ಮದ ಮನೀ.. ನಿಮ್ಮ ಅವ್ವಾ ಅಪ್ಪಾ... ನಿಮ್ಮ ಮಕ್ಳು.. ನಂದೂ ಅಂತ ಏನದ ಇಲ್ಲೆ... ನೀವೇನು ಗಂಡಸ್ರು... ರಾಜಾನ್ಹಂಗ ಕುರ್ಚಿ ಮ್ಯಾಲ ಕೂತ ಬರತೀರಿ... ರೊಕ್ಕಾ ಎಣಿಸಿಗೊಂಡ ಬರತೀರೀ ಅಂತ ದಿಮಾಕು ನಿಮಗ... " ಸಾಕ ಮಂಗಳಾರತಿ!..

ಹುಡುಗೂರು... ಅವೇನ ಕಡಿಮೀಯೇನು...

"ಅಪ್ಪಾ, ನನಗ ನೋಟಬುಕ್ಕು ಬೇಕೂ... ಪುಸ್ತಕಾ.. ಡ್ರೆಸ್ಸು.. ಶೂಸು, ಬ್ಯಾಗು... ಪಾಸು... " ಅಂತ ಮನೀಗೆ ಬಂದಕೂಡ್ಲೇ ಬೇಡಿಕೀ ಇಡಲಿಕ್ಕೆ ಸುರೂ... ಇನ್ನ ಹೆಣ್ಣಮಕ್ಕಾದ್ರಂತೂ ಮುಗೀತು... ಇದೆಲ್ಲಾನೂ ಅಲ್ಲದ ಅವ್ರದು ಬ್ಯೂಟೀ ಪಾರ್ಲರು ( ಕೂದಲಾ ಕತ್ತರಿಸಿಕೋಳ್ಳಿಕ್ಕರೆ ಬೇಕಲಾ... ) ಕಾಸ್ಮೆಟಿಕ್ಸು, ಇದೆಲ್ಲಾದರ ಲಿಸ್ಟು ಕೈಯಾಗ ಹಿಡಕೊಂಡನಿಂತಿರ್ತಾರ.. ಹೆಂಡತಿ ಬೇಡಿಕೀ... ಅಕೀ ಏನ ಕಡಿಮೀ..

"ರೀ ಲಗ್ನಾಗಿ ಬಂದಾಗಿಂದ ಕೋಲ ಮ್ಯಾಲೊಂದ ಸೀರೀ... ಮೈಮ್ಯಾಲೊಂದ ಸೀರೀ ಬಿಟ್ರ ಮೂರನೇ ಸೀರೀ ಕಂಡಿಲ್ಲಾ... ಏನ ಜನ್ಮೋ" ಅಂತ ಹಂಗಸಾಕಿ. ಇನ್ನ ಅವ್ವಾ ಅಪ್ಪಾ.. "ಪುರಾಣ ಮಂಗಳದನಪಾ... ಆಚಾರಿಗಷ್ಟು ದಕ್ಷಿಣೀ... ಹಣ್ಣು ಕಾಯಿ..." ಅಂತ ತಮ್ಮ ಬೇಡಿಕೀ ಮುಂದಿಡತಾರ. ಅದೆಲ್ಲಾ ಹೋಗ್ಲಿರೀ.. ಈಗ ನನ್ನ ಅಗದೀ ಪರ್ಸನಲ್ ವಿಷಯಕ್ಕೂ ಅನಿಸಿಕೊಳ್ಳೋ ಹೊತ್ತ ಬಂದದರೀ.. ಅದಕ್ಕನ ಅಂದೆ ನಮ್ಮದು ಏನ ಖೊಟ್ಟಿ ನಸೀಬೂ ಅಂತ!

ಅಂತೂ ನನ್ನ ಅರ್ಧಾ ತಾಸಿನ ಕೆಲಸಾ ಮುಗಸಿ ತಯಾರಾಗಿ "ಈಗರೇ ಏಳತೀಯೇನು.." ಅಂದೆ.

ಗಡಬಡಿಸಿ ಎದ್ದವಳೇ, "ಅಲ್ರೀ, ನೀವು ತಯಾರಾಗಿ ಕೂತು ನನ್ನ ಎಬ್ಬಸ್ತೀರಲ್ರೀ.. ಮಹಾಸ್ವಾರ್ಥಿ ಮನಶ್ಯಾರಪಾ... ನೀವು.." ಎಂದು ನನ್ನನ್ನು ಜಾಡಿಸಿದಳು. ನಾನು ತೆಪ್ಪಗೆ ಹೊರಗೆ ಬಂದೆ. ಇವೊತ್ತಿನ ಪೇಪರಾದರೂ ಬಂದದೇನೋ ಅಂತ ನೋಡಿದೆ... ಪೇಪರೂ ಬಂದಿರಲಿಲ್ಲ... ಸುಮ್ಮನೆ ಕುರ್ಚಿಯ ಮ್ಯಾಲೆ ಕೂತು ಕಣ್ಣು ಮುಚ್ಚಿದೆ..

"ದಿನಾ ಬೆಳಗ್ಗೆದ್ದು ವಾಕಿಂಗ್ ಅಂತ ಒಂದ ಅರ್ಧಾ ತಾಸರೆ ಸ್ವಾತಂತ್ರ್ಯ ಅನುಭವಿಸ್ತಿದ್ದೆ. ದೇವರ, ಅದಕ್ಕೂ ಕಲ್ಲ ಹಾಕಿದೇನಪಾ.. ಕಿಲಾಡಿ ನನ್ನಮಗಾ ನೀ.." ಎಂದು

ಕ್ಯಾಲೆಂಡರಿನಲ್ಲಿ ನಗುತ್ತ ಕೊಳಲೂದುತ್ತಲಿದ್ದ ಆ ದೇವರನ್ನೂ ಬೈದೆ. ಅವ ನಗುತ್ತಲೇ ಇದ್ದ... ಅಂವಾ ಒಬ್ಬಂವನ ಅಂದದ್ದು ಅನಿಸಿಗೊಂಡೂ ನಗಾಂವಾ... ಅಲ್ಲದೆ ಅವನ ದೈವ ನಮಗಿಂತ ಖೊಟ್ಟಿ.. ನಮಗ ಒಬ್ಬಾಕೇ ಹೆಂಡ್ತಿ... ಇಂವಗ ಸಾವಿರಾರು.. ಎಷ್ಟರೆ ಅನಿಸಿಕೋಬೇಕ ಅಂವಾ... ಅದಕ್ಕನ ಅಂವಾ ಕೊಳಲು ಊದೂ ಪ್ಲ್ಯಾನು ತಗದಿರಬೇಕು ಅಂತ ಅಂದುಕೊಂಡೆ...

"ಆರ ಹೊಡೀತಲ್ಲಾ... ಯಾವಾಗ ಬರಾಕೀ ನೀ.." ನಡುವೆಯೇ ಎಚ್ಚರಾಗಿ ಕೇಳಿದ್ದೆ... ನನಗೂ ಅವಳ ಬೈಗುಳ ಕೇಳುವ ಹುಕೀ.

"ತಡಿರೀ... ಆವಾಗಿಂದ ಹೇಳ್ಳಿಕ್ಕೇ ಹತ್ತೇನೀ... ಐದ ಮಿನಟಂತ... "

ಅಂತೂ ಆರೂ ಹದಿನೈದಕ್ಕ ಸರಿಯಾಗಿ ಹೊರಗ ಬಂದ್ಲು ತಯಾರಾಗಿ. ಛಂದನೀ ಸೀರಿ, ಅದಕ್ಕ ಮ್ಯಾಚಿಂಗ್ ಬ್ಲೌಜು, ಮೇಕಪ್ಪು ಸಹಿತವಾಗಿ. ಕೈಯಾಗ ಒಂದು ವ್ಯಾನಿಟಿ ಬ್ಯಾಗೂ.

"ಅಯ್ಯಯ್ಯ... ನನ ಕರ್ಮಾ... ಮಾರ್ನಿಂಗ್ ವಾಕ್ ಅಂದ್ರ ಸಂಜೀ ಸಿನಿಮಾ ಅಂತ ತಿಳದಂಗ ಕಾಣತದ... ಎಷ್ಟ ತಯಾರಾಗೀ... ಏನ ಕತೀ..."

ಇಲ್ಲ ಇಲ್ಲಾ... ಬಾಯಿತುದೀ ತನಕಾ ಬಂದ ಮಾತು ಉಗುಳಿನ ಜೋಡೀ ನುಂಗಿದೇ...

ಇಬ್ಬರೂ ಹೊರಟೆವು. ಬಾಯಿ ಸುಮ್ಮನಿರಬೇಕಲಾ... ಹರಟೆ ಸುರು ಆತು. ಅಂದ್ರ ಅಕೀ ನೆರಿ ಹೊರಿಯವ್ರನ ಬೈಯೂದು... ನಾ ಗೋಣ ಅಲ್ಲಾಡಸೂದು... ಅಷ್ಟ..

"ಅಲ್ರೀ... ಹೆಂತಾ ಏರಿಯಾಕ್ಕ ಕರಕೊಂಡ ಬಂದೀರೀ?"

"ಯಾಕ? ಏರಿಯಾಕ್ಕ ಏನಾಗೇದ.. ಸುತ್ತೂ ಕಡೇ ಗಿಡಾ ಮರಾ... ಹಕ್ಕಿ ಪಕ್ಷಿ... ಎಲ್ಲೆಲ್ಲೂ ಟ್ರಾಫಿಕ್ ಗದ್ದಲಿಲ್ಲಾ... ಹೊಗೀ ಇಲ್ಲಾ... ಕಸಾ ತಗಿಯವ್ರ ಧೂಳಿಲ್ಲಾ... ದೂರ ದೂರದ ತನಾ ಮನೀಗಿನೀ ಏನೂ ಇಲ್ಲಾ... ಅಗದೀ ಕಾಮ್... "

"ಹಂಗಲ್ರೀ.. ಇಲ್ಲೆ ಯಾರ ಮನಿನೂ ಇಲ್ಲಾ... ಅಲ್ಲೊಂದು ಇಲ್ಲೊಂದು ಇದ್ರೂ ಅವ್ರ ಕಂಪೌಂಡಿನ್ಯಾಗ ಸಂಪಿಗೀ, ದಾಸವಾಳಾ, ಗುಲಾಬೀ ಹೂವಿನ ಗಿಡಾನೂ ಇಲ್ಲಲ್ರೀ.... ಹೆಂತಾ ಮಂದ್ಯೋ ಏನೋ... "

ಸುತ್ತ ಮುತ್ತ ಪರೀಕ್ಷಾ ದೃಷ್ಟಿಯಿಂದ ನೋಡುತ್ತಲಿದ್ದ ಆಕೆಯ ಬಾಯಿಯಿಂದ ಮುತ್ತು ಉದುರಿದ್ದವು.

"ಯಾವರೆ ಹೂ ಹಚ್ಚವಲ್ಲರ್ಯಾಕ ಬಿಡವೊಲ್ಲರ್ಯಾಕ.. ನಮಗೇನ ಮಾಡೋದು ಇಲ್ಲದ ಉಸಾಬರಿ ತೊಗೊಂಡು... "

"ಹಂಗಲ್ರೀ... ಇವತ್ತ ಶುಕ್ರವಾರಾ... ನಮ್ಮನ್ಯಾಗ ಲಕ್ಷ್ಮೀಪೂಜಾ ಇರತದ... "

"ನಮ್ಮನ್ಯಾಗ ಅಲ್ಲ? ಅವರ ಮನ್ಯಾಗೇನ ಅಲ್ಲಲ್ಲಾ...! ನಮಗ ದಿನಾ ಕೊಡೋಹಂಗ ಹೂವಿನ ಹುಡುಗಿ ಬಂದ ಕೊಟ್ಟುಹೋಗತಾಳ..."

"ಇಲ್ರೀ... ಅಕಿನ್ನ ಬಿಡಸಿಬಿಟ್ಟೆ... ಅಕೀ ಈಗೀಗ ಅಗದೀ ಕಡಿಮೀ ಹೂ ಕೊಡಲಿಕ್ಕತ್ತಿದ್ಲು... ಹೆಚಿಗೀ ಕೊಡಂದ್ರ ತುಟ್ಟಿ ಆಗ್ಯಾವ್ರೀ.. ಅನ್ನಾಕೀ.. ನಾಳಿಂದ ಬರಬ್ಯಾಡಾ ಅಂತ ನಿನ್ನೇ ಹೇಳಿಬಿಟ್ಟೇನಿ..."

"ನೀ ಅಂತೂ... ಇನ್ನೊಂದ ಐದು ರುಪಾಯಿ ಹೆಚ್ಚ ಮಾಡಿದ್ದರ ಮುಗದ ಹೋಗತಿತ್ತು... ಬಡವರಿಗೆ ಹಂಗ ಚೌಕಾಸಿ ಮಾಡಬಾರದು... ನೀವು ಮಾಲ್ಕ ಹೋಗಿ ಅವ್ರು ಹೇಳಿದ್ದ ರೊಕ್ಕಾ ಕೊಟ್ಟ ಸಾಮಾನ ತರತೀರಿ... ಇಂತವ್ರ ಹತ್ರನ ನಿಮ್ಮ ಆಟ ಎಲ್ಲಾ... ಹೋಗ್ಲಿ ಬಿಡು... ಇಲ್ಲಿಂದ ತಿರಗಿ ಹೊಗಬೇಕಾದ್ರ ಯಾರರೇ ಹೂವಿನವ್ರು ಇದ್ದ ಇರತಾರ. ಅವ್ರ ಹತ್ರ ಒಂದಿಷ್ಟ ಹೂ ತೊಗೊಂಡ ಹೋದರಾತು.... ನಾಳಿಂದ ಅಕೀಗೆ ಬರ್ಲಿಕ್ಕೆ ಹೇಳು.. "

"ಅಯ್ಯ... ಯಾರರೆ ಯಾಕ ಬೇಕೂ... ತಡೀರೀ... ತಡೀರಿ... ಸ್ವಲ್ಪ.... ಇಲ್ಲೆ ನೋಡ್ರಿ... ಇವ್ರ ಮನ್ಯಾಗ ಗುಲಾಬೀ ಹೂ ಕಾಣತಾವ..  ಹೂಂ. ರಗಡ ಹೂ ಅವ... ಪಕಳಿ ಎಲ್ಲಾ ಉದರಿ ಹೊಂಟಾವ... ಎಂಥಾ ಮಂದ್ಯೋ ಅಂತೇನಿ.. ತಾವರೆ ತಗದು ದೇವ್ರಿಗೆ ಏರಸಬೇಕೂ... ಅದೂ ಇಲ್ಲಂದ್ರ ಯಾರಿಗರೇ ಕೊಟ್ಟರೆ ಕೊಡಬೇಕು...ಅವ್ರರೇ ದೇವ್ರಿಗೆ ಏರಸ್ತಾರ... ಕಾಂಪೌಂಡಿಂದ ಹೊರಗೂ ಚಾಚ್ಯಾವು... " ಎನ್ನುತ್ತ ಆ ಕಾಂಪೌಂಡಿನತ್ತ ಗೂಳಿಯಂತೆ ನುಗ್ಗಿದ್ದಳು. ಐದಾರು ಹೂಗಳನ್ನು ಕಿತ್ತುಕೊಂಡು ತನ್ನ ವ್ಯಾನಿಟಿಬ್ಯಾಗಿನಲ್ಲಿ ಹಾಕಿಕೊಂಡಿದ್ದಳು. ನನಗೋ ಇವಳ ಜೊತೆಗೆ ಬಂದದ್ದಕ್ಕೆ ಮನದಲ್ಲಿಯೇ ಹೆದರಿಕೆಯಾಗತೊಡಗಿತ್ತು. ಇಂಥಾ ಕಳ್ಳರ ಜೊತೆಗೆ ನನ್ನನ್ನು ಯಾರಾದರೂ ನೋಡಿದ್ರೆ ಅಂತ.

"ನೋಡ್ರೀ.. ನಿಮಗ ಹತ್ತ ರುಪಾಯಿ ಉಳಸಿದೆ ಇವತ್ತ.. " ನನ್ನಾಕೆ ಬೀಗಿದ್ದಳು...

'ಇನ್ನಾ ಒಂದಷ್ಟ ದೂರ ಹೋದ್ರ ಅಲ್ಲೆ ಕುಲಕರ್ಣಿಯವ್ರ ಮನ್ಯಾಗ ದಾಸವಾಳ ಹೂ ಸುರದಾವು... ನಿನ್ನೆ ನನಗ ಬಾಜೂ ಮನೀ ತಾರಾ ಹೇಳಿದ್ಲು... ಅಕೀ ಮನ್ಯಾಗಂತೂ ದಿನಾ ದೇವ್ರ ಮನೀ ಅಗದೀ ಛಂದ ಕಾಣತದ ನೋಡ್ರಿ.. ಥಳಾ ಥಳಾ ಹೊಳಿಯೋ ದೇವ್ರು... ಎಲ್ಲಾ ದೇವ್ರ ತಲೀಮ್ಯಾಲೆ ಗುಲಾಬಿ, ಕೆಂಪು ದಾಸವಾಳದ ಹೂ.. "

ಓಹೋ... ಇಕೀಗೆ ವಾಕಿಂಗಿಗೆ ಇನ್‌ಸ್ಪಿರೇಶನ್ನು ಆ ತಾರಾ ಹಂಗಾರ  ಎಂದುಕೊಂಡು ವ್ಯಂಗ್ಯವಾಗಿ ನಕ್ಕೆ... ಆದರೆ ಈಗ ಅವಳಿಗೆ ಯಾವುದೇ ಮಾತಿನ ಮೇಲೂ ಲಕ್ಷ್ಯವಿರಲಿಲ್ಲ.. ಅರ್ಜುನನಿಗೆ  ಹಕ್ಕಿಯ ಕಣ್ಣೊಂದೇ ಕಾಣುವಂತೆ ಕೇವಲ ಹೂಗಳೇ ಕಾಣುತ್ತಲಿದ್ದವು... ಉತ್ಸಾಹದಿಂದ ಮುನ್ನಡೆಯುತ್ತಲಿದ್ದಳು!

"ಅಲ್ಲಾ... ನೀಯೇನ ವಾಕಿಂಗಿಗೆ ಬಂದೀಯೋ.. ಮಂದೀ ಮನೀ ಹೂ ಕಳುವ ಮಾಡ್ಲಿಕ್ಕೆ ಬಂದೀಯೋ..."

"ಇದಕ್ಕೇನ ಕಳೂ ಅಂತಾರೇನ್ರೀ? ಅವ್ರೂ ಹೂನೂ ಹರಿಯಂಗಿಲ್ಲಾ.. ಗಿಡದಾಗ ಒಣಗಿಹೊಂಟಾವ... ನಾವರೆ ಏನ ಮಾಡ್ತೇವೀ,,, ಹರಕೊಂಡು ದೇವ್ರಿಗೆ ಏರಸ್ತೇವಿ.. ಇದರಿಂದ ಅವ್ರಿಗೂ ಅರ್ಧಾ ಪುಣ್ಯಾ ಬರತದ... ರೀ.. ರೀ... ಅಲ್ನೋಡ್ರೀ... ಅಗದೀ ಟಿಪ್‌ಟಾಪ್ ಡ್ರೆಸ್ ಹಾಕ್ಯಾನ... ಆ ಮುದುಕಾ... ಹೆಂಗ ಆ ಕೈಯಾನ ಬಡಗೀಲೆ ಗಿಡದ ಟೊಂಗೀ ಎಳಕೊಂಡು ಹೂ ಹರೀಲಿಕ್ಕತ್ಯಾನ ನೋಡರಿ.. ಏನ ಮಂದ್ಯೋ... ನನಗ ಇಲ್ಲೇನ ಹೂ ಸಿಗೂಹಂಗ ಕಾಣಂಗಿಲ್ಲಾ..."

"ಅಂವಾ ನಿನಗ ದೂರದ ಸಂಬಂಧಿಕನ ಇರಬೇಕೂ..."

ಮೆಲ್ಲಗೆ ನನಗೆ ಮಾತ್ರ ಕೇಳಿಸುವಹಾಗೆ ಮಾತಾಡಿಕೊಂಡೆ.

"ನೀವೂ ಇಷ್ಟ ದಿನಾ ವಾಕಿಂಗ್ ಮಾಡಿದ್ರಿ.. ದಂಡಾ... ಒಂದ ದಿನಾನರೆ ಒಂದಿಷ್ಟ ಹೂ ತಂದ್ರ್ಯಾ... ಬರೇ ಮಾತಾಡತಾರ ಬಾಷ್ಕಳಪಂಡಿತಾ..."

ಅಕ್ಕಪಕ್ಕ ಹೊಂಟ ನಡೆದಾಡಿಗರು ನನ್ನನ್ನು ಯಾವುದೋ ಪಾಪದ ಪ್ರಾಣಿಯನ್ನು ನೋಡಿದಂತೆ ನೋಡುತ್ತಿದ್ದಾರೆನ್ನಿಸಿತ್ತು. ಮರ್ಯಾದೆಗಂಜಿ ಸುಮ್ಮನೆ ಆಕೆಗಿಂತ ಸ್ವಲ್ಪ ಮುಂದೆ ನಡೆಯತೊಡಗಿದ್ದೆ.

"ರೀ... ರೀ... ಸ್ವಲ್ಪ ತಡೀರೀ... ಇಲ್ಲೊ ಒಂದಿಷ್ಟ ಹೂ ಅವ... ಥಂದಾಥಂದ ಬಣ್ಣದ್ವು... ಅದರಾಗನೂ ಇಲ್ಲೀ ದಾಸವಾಳಾ ನೋಡ್ರೀ.. ಏನ ಥಂದವ.."

ನನ್ನ ಅರ್ಧಾಂಗಿ ಈಗ ಚಿಗರೆಯ ನಡಿಗೆಯಿಂದ ಹೊರಟಿದ್ದಳು.


ಅಷ್ಟರಲ್ಲಿಯೇ ಗೇಟು ತೆರೆದು ಒಳಗಿನಿಂದ ಒಬ್ಬ ವ್ಯಕ್ತಿ ನಾಯಿಯನ್ನು ಲೈಟಿನ ಕಂಬಕ್ಕೆ ಕಾಲೆತ್ತಲು ಹೊರಗೆ ಕರೆದುಕೊಂಡು ಬಂದಿದ್ದ. ಇವಳು ತನ್ನ ಮನೆಯ ಕಾಂಪೌಂಡಿನ ಹತ್ತಿರ ನಿಂತು ಹೂ ಹರಿಯುವುದನ್ನು ನೋಡಿದ ಆ ನಾಯಿ ಮಾಲಿಕನ ಕೈಯಿಂದ ಸರಪಳಿ ಕಿತ್ತುಕೊಂಡು ಇವಳತ್ತ ನುಗ್ಗಿ ಬಂದಿತ್ತು. ಕಾಲನ್ನೇ ಹಿಡಿದಿತ್ತು... ಒಳಗಿನ ಮಾಂಸಖಂಡಗಳು ಕಾಣುವಂತೆ.

ಆ ಮನೆಯವರಿಂದ ಪುಷ್ಪಗಳು ಸಿಗದಿದ್ದರೂ ಪುಷ್ಪಾರ್ಚನೆಯಂತೂ ಚೆನ್ನಾಗೇ ಆಗಿತ್ತು. ಕಳ್ಳಿ ಎನ್ನುವ ಹೊಸ ನಾಮಧೇಯವೂ ನನ್ನವಳಿಗೆ ಸಿಕ್ಕಿತ್ತು! ಅಷ್ಟೇ ಅಲ್ಲ.. ಅವನು ನನಗೂ ಸೇರಿಯೇ ಮರ್ಯಾದೆ ತೆಗೆದಿದ್ದ...


ಅಲ್ಲಿಂದಲೇ ಆಟೋ ತೆಗೆದುಕೊಂಡು ಹಾಸ್ಪಿಟಲ್ಲಿಗೆ ಹೋದೆವು. ಅಂದಿನಿಂದ ಹೊಸ ಡ್ಯೂಟಿ... ಸಿವಿಲ್ ಹಾಸ್ಪಿಟಲ್ಲಿಗೆ ತಿರುಗಾಟ... ಹೊಕ್ಕುಳ ಸುತ್ತಲೂ ಇಂಜೆಕ್ಶನ್ ಮಾಡಿಸಬೇಕಲ್ಲ!


ಈಗ ಮತ್ತೆ ನಾನೊಬ್ಬನೇ ವಾಕಿಂಗ್ ಆರಂಭಿಸಿದ್ದೇನೆ... ಆದರೆ ಈಗ ಹಳೆಯ ರೂಟಿನಲ್ಲಲ್ಲ. ಆದರೂ ಕಳೆದುಹೋದ ಸ್ವಾತಂತ್ರ್ಯ ಮತ್ತೆ ದೊರೆತಿದೆ. ಯಥಾಪ್ರಕಾರ ಹೂವಿನ ಹುಡುಗಿ ಹೂವು ತಂದುಕೊಡುತ್ತಿದ್ದಾಳೆ!


■



# 2020ರಲ್ಲಿ ಬರಬಹುದಾದ ಕನ್ನಡ ಚಿತ್ರಗಳು



ಪರಿಕಲ್ಪನೆ: ಆನಂದ, ವೈ.ವಿ. ಗುಂಡೂರಾವ್, ಪ್ರಕಾಶ್ ಶೆಟ್ಟಿ.

ವಿನ್ಯಾಸ: ರವೀಂದ್ರ ರಾವ್









TEMPLE OF KNOWLEDGE

# BEECHI VIDYA KENDRA

Email: admin@beechi.in
Web: www.beechi.in
Mob: 9740968677, 9035302302, 9035007003

PLACEMENT SERVICES FOR:

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

## Beechi Prakashana

**Get your Book Published !**

**We provide Publishing, Marketing & Distribution support to Authors**

- Sell your books both online & Retail( Book Shops)
- Get 100/ Royalty
- Retain Full copy Rights
- Publish your book faster
- Get paid for every book sold

## ಬೀಚಿ ಪ್ರಕಾಶನ

**ಲೇಖಕರೇ, ತಮ್ಮ ಪುಸ್ತಕಗಳು ಪ್ರಕಟವಾಗಬೇಕೆ?**

ನಾವು ಲೇಖಕರಿಗೆ ಪುಸ್ತಕಗಳನ್ನು ಮುದ್ರಿಸಲು, ಮಾರಾಟ ಮಾಡಲು ಹಾಗೂ ವಿತರಿಸಲು ಸಹಕರಿಸುತ್ತೇವೆ.



- ನಿಮ್ಮ ಪುಸ್ತಕಗಳನ್ನು ಆನ್‌ಲೈನ್ ಮತ್ತು ಸಗಟು ವ್ಯಾಪಾರ ಮಳಿಗೆಗಳಿಂದ ಮಾರಾಟ ಮಾರಬಹುದು.(ಪುಸ್ತಕ ಅಂಗಡಿ).
- ರಾಯಧನ ೧೦೦% ಪಡೆಯುತ್ತೀರಿ.
- ನಕಲು ಹಕ್ಕುಗಳನ್ನು ಉಳಿಸಿಕೊಳ್ಳಿ.
- ನಿಮ್ಮ ಪುಸ್ತಕಗಳನ್ನು ತ್ವರಿತವಾಗಿ ಮುದ್ರಿಸಬಹುದು.
- ಪ್ರತಿ ಪುಸ್ತಕ ಮಾರಾಟದ ಬಳಿಕ ಹಣ ಪಡೆಯುತ್ತೀರಿ.

**CONTACT: 9845264304**

# ಸೀ, ನೋ, ಹಿಯರ್ ಈವಿಲ್..

● ಸಿ.ಆರ್.ಸತ್ಯ

"ಹ್ಯಾಪಿ ನ್ಯೂ ಈಯರ್ ಕೃಷ್ಣಪ್ಪನವರೇ! ಏನು, ಹೇಗೆ ನಡೀತಿದೆ ಹೊಸ ವರುಷದ ಚಟುವಟಿಕೆಗಳು?"

"ಓ, ವೆಂಕಯ್ಯನವರೇ! ಏನು ಹೊಸ ವರುಷವೋ ಏನೋ! ಕ್ಯಾಲೆಂಡರ್ ಪುಟಗಳನ್ನ ಹನ್ನೆರಡು ಸಲ ತಿರುಗಿಸಿದರೆ ಇನ್ನೊಂದು ವರ್ಷ ಓಡಿ ಬರುತ್ತೆ ಬಿಡಿ. ಒಂದೊಂದು ವರ್ಷಕ್ಕೂ ನನ್ನದೊಂದು ಹೊಸ ಕತೆ ಅಷ್ಟೆ!"

"ಅದ್ಯಾಕೆ, ಮಕ್ಕಳು ಮೊಮ್ಮಕ್ಕಳ ಜೊತೆಗೆ ಹೊಸ ವರ್ಷ ಬಂತು ಅಂತ ಪಾರ್ಟಿ ಗೀರ್ಟಿ ಅಂತ ಕುಣೀಲಿಲ್ವೆ?"

"ಕುಣ್ಯೋದೆ? ಸಧ್ಯ, ನಡೆದರೆ ಸಾಕಾಗಿದೆ. ವರ್ಷ ಶುರು ಆಗಿಲ್ಲ, ಆಗಲೆ ನನ್ನ ಮಗನ ಒತ್ತಾಯಕ್ಕೆ ಎರಡು ಮಂಡಿಗಳಿಗೂ ನೀ ಕ್ಯಾಪ್ ರೀಪ್ಲೇಸ್ ಮೆಂಟ್ ಮಾಡಿಸ್ಕೊಂಡೆ. ಅವು ಇನ್ನೂ ನಾರ್ಮಲ್ ಆಗಿಲ್ಲ. ಅಷ್ಟರಲ್ಲೇ ನನ್ನ ಮಗಳು– ಅಪ್ಪಾ, ನಿನ್ನ ಬೊಚ್ಚು ಬಾಯಿ ನೋಡಿ ಸಾಕಾಗಿ ಹೋಗಿದೆ, ಡೆಂಟಿಸ್ಟ್ ಹತ್ತಿರ ಹೋಗೋಣ ಬಾ, ನಿನಗೆ ಹೊಸ ಹಲ್ಲುಗಳನ್ನ ಕಟ್ಟಿಸ್ತೀನಿ– ಅಂತ ಎಳೆದು ಕೊಂಡು ಹೋದ್ಲು. ಆ ಡೆಂಟಿಸ್ಟ್ ಪುಣ್ಯಾತ್ಮ ಮೂವತ್ತೆರಡು ಹಲ್ಲುಗಳನ್ನೇನೋ ಬಾಯಿ ತುಂಬಾ ಇಟ್ಟ. ಈಗ ನನಗೆ ಆ ಮೂವತ್ತೆರಡು ಕಡೆ ಮತ್ತು ಎರಡು ಮಂಡಿಗಳನ್ನೂ ಸೇರಿಸಿದ್ರೆ, ಒಟ್ಟು ಮೂವತ್ತು ನಾಲ್ಕು ಕಡೆ ಯಮ ಯಾತನೆ ಇದೆ. ಇದು ಹೊಸ ವರ್ಷದ ಸಂಭ್ರಮ ಅಂತ ಹೇಳ್ತೀರಾ?. ಅಂದ ಹಾಗೆ, ವೆಂಕಯ್ಯ, ನಿಮ್ಮ ನ್ಯೂ ಈರ್ಯ ಹ್ಯಾಗೆ ಶುರುವಾಯ್ತು?"

"ಈ ವರುಷದ ಹೊಸ ಐಟಮ್ ಅಂದರೆ, ಥ್ಯಾಂಕ್ಸ್ ಟು ಮೈ ಸನ್, ಹೊಸ ಹಿಯರಿಂಗ್ ಏಡ್ ಹಾಕಸ್ದ. ಈಗ ನೀವು ಮಾತಾಡೊದೆಲ್ಲಾ ಎಷ್ಟು ಚೆನ್ನಾಗಿ ಕೇಳುತ್ತೆ ಅಂತೀರಿ! ನಾನು ಬೇಡ ಅಂತಾನೇ ಇದ್ದೆ. ನನ್ನ ಹೆಂಡತಿ –ನಿಮ್ಮ ಕಿವಿಗೆ ಇಷ್ಟು ವರುಷಗಳು ಅರಚಿಕೊಂಡು ನನಗೆ ಗಂಟಲು ಬಿದ್ದು ಹೋಗಿದೆ. ಈ ವರ್ಷವಾದರೂ ಹಿಯರಿಂಗ್ ಏಡ್ ಹಾಕಿಸಿಕೊಳ್ಳಿ ಅಂತ ಮೊಂಡು ಹಿಡಿದಳು."

" ಒಳ್ಳೇದು ಆಯ್ತು ಬಿಡಿ. ಅಂದ ಹಾಗೆ ಮನೇಗೆ ಇನ್ನೇನು ಹೊಸದು ಬಂತು ಈ ವರ್ಷ?"

" ಹೇಳಿಕೊಳ್ಳೋದು ಏನೂ ಇಲ್ಲ ಬಿಡಿ. ನನ್ನ ಹೆಂಡತಿಗೆ ಕಣ್ಣು ಡಾರ್ಕ್ಟ ಸೋಡಾ ಗ್ಲಾಸ್ ಕೊಟ್ಟಿದ್ದಾರೆ. ನೋಡೊಕ್ಕೇನೋ ಇನ್ನೂ ಚೆನ್ನಾಗೇ ಕಾಣಿಸ್ತಿದಾಳೆ. ಹೊಸ ವರ್ಷಕ್ಕೆ ನನಗೂ ಒಂದು ಹೊಸ ಹೆಂಡತಿ ಬಂದ ಹಾಗಾಯ್ತು!"

"ವೆಂಕಯ್ಯ, ಈ ವರ್ಷ ನಿಮ್ಮ ಶುಗರ್ ಲೆವೆಲ್ ಹೇಗಿದೆ? ನಾರ್ಮಲ್ಲೇ..?"

" ಮೊದಲನೇ ವಾರ ಇಪ್ಪತ್ತು ಪಾಯಿಂಟ್ ಗಳಷ್ಟು ಮೇಲೆ ಹೋಗಿತ್ತು. ನನ್ನ ಮಗನ ಕಂಪೆನಿಯವರು ಹೊಸ ವರುಷದ ಸ್ವೀಟ್ ಪ್ಯಾಕೆಟ್ ಕೊಟ್ಟಿದ್ದರು. ಸ್ವಲ್ಪ ಜಾಸ್ತೀನೇ ತಿಂದು ಬಿಟ್ಟೆ. ಯಾಕೋ, ವರ್ಷ ವರ್ಷಕ್ಕೂ ಆಸೆಗಳು ಜಾಸ್ತಿ ಆಗುತ್ತಾನೇ ಇವೆ ಕೃಷ್ಣಪ್ಪ."

"ಅದು ನಮಗೆಲ್ಲರಿಗೂ ಆಗೋದೇ ಬಿಡಿ. ನಿಮ್ಮ ಮಗನ ಕಂಪೆನಿ ಅಂದಾಗ ನನ್ನ ಮಗ ಜ್ಞಾಪಕಕ್ಕೆ ಬಂದ. ಅವನೂ ನನ್ನ ಸೊಸೇನೂ ನ್ಯೂ ಈರ್ಯ ಸೆಲಿಬ್ರೇಶನ್ ಅಂತ ಹಿಂದಿನ ರಾತ್ರಿ ಚರ್ಚ್ ಸ್ಟೀಟ್‌ಗೆ ಹೋಗಿ, ಕೂಗಾಡಿಕೊಂಡು, ಒಂದನೇ ತಾರೀಖು ಬೆಳಿಗ್ಗೆ ಸುಸ್ತಾಗಿ ಬಂದರು. ಅಲ್ಲಿ ಏನು ಮಾಡಿದ್ರೋ ಏನೋ!"

" ಈ ಐಟಿ ಬೀಟೀ ಹುಡುಗರು ಬಿಡಿ, ಅವರದೇ ಒಂದು ಪ್ರಪಂಚ. ಅವರ ಪ್ರಕಾರ ಅವರೆಲ್ಲಾಆ ಚರ್ಚ್ ಸ್ಟ್ರೀಟ್ ಗೆ ಹೋಗಿ, ಬೀರ್ ಕುಡಿದು ಕೂಗಾಡದಿದ್ದರೆ, ಹೊಸ ವರ್ಷ ಬರೋದೇ ಇಲ್ಲವಂತೆ. ಜನವರಿ ಒಂದನೇ ತಾರೀಖು, ಸೂರ್ಯ ಚರ್ಚ್ ಸ್ಟ್ರೀಟ್ ನಲ್ಲಿ ಮಾತ್ರ ಹುಟ್ಟೋದೂ ಅಂತ ಅವರ ನಂಬಿಕೆ."

"ವೆಂಕಯ್ಯ, ಏನು, ನಿಮ್ಮ ಕಾಲಿಗೆ ಹೊಸ ಚಪ್ಪಲಿಗಳನ್ನ ಏರಿಸಿದ ಹಾಗೆ ಇದ್ಯೆಲ್ಲಾ..? ನ್ಯೂ ಈಯರ್ ಪರ್ಚೇಸೇನೂ?"

"ಅಯ್ಯೋ, ಇಲ್ಲ. ಮೊನ್ನೆ ಸಾಯಿಬಾಬಾ ಗುಡಿಗೆ ಹೋಗಿದ್ದೆ. ಅಲ್ಲಿ ಚಪ್ಪಲಿಗಳು ಅದಲು ಬದಲು ಆಗಿ ಹೋದವು ಅಷ್ಟೆ!"

"ಈ ವರ್ಷ ನಿಮ್ಮ ಎರಡನೇ ಮಗ ನಿಮ್ಮನ್ನ ಅಮೇರಿಕಾಗೆ ಬನ್ನಿ ಅಂತ ಇನ್ನೂ ಕರೆದಿಲ್ವೇನೂ?"

"ಕರೆದ. ಕರೆದ ಪಾಪ. ಆದರೆ ನನ್ನ ಸೊಸೆಗೂ ನನ್ನ ಹೆಂಡತೀಗೂ ಒಂದು ವಿಷಯದಲ್ಲಿ ತಕರಾರು ಬಂದಿದೆ. ಇದು ಬಗೆಹರಿದ ಮೇಲೆ ಅಮೇರಿಕಾ ಟ್ರಿಪ್ಪು"

"ಏನು ತಕರಾರು?"

" ನನ್ನ ಸೊಸೆ ಈ ವರ್ಷದಿಂದ ನೀವು ಅಮೇರಿಕಾಗೆ ಬಂದರೆ, ಕಡ್ಡಾಯವಾಗಿ ಶರ್ಟು ಪ್ಯಾಂಟ್ ಹಾಕ್ಕೊಂಡೇ ಬರಬೇಕು, ಅಲ್ಲಿ ಶರ್ಟು ಪ್ಯಾಂಟ್ನಲ್ಲೇ ಓಡಾಡಬೇಕೂ. ನಿಮ್ಮ ಒಂಬತ್ತು ಗಜದ ಸೀರೆ ಅಮೇರಿಕಾದವರಿಗೆ ಸರಿಹೋಗೋದಿಲ್ಲ, ನನಗೂ ಸರಿಹೋಗೋದಿಲ್ಲಾ ಅಂತ ಮೊಂಡು ಹಿಡ್ಕೊಂಡಿದಾಳೆ. ಅದಕ್ಕೆ ನನ್ನ ಹೆಂಡತಿ ಈ ವರ್ಷ ಏನು ಸ್ಪೆಶಲ್ಲು, ನಾನು ಯಾವ ವರ್ಷಾನೂ ಶರ್ಟು ಪ್ಯಾಂಟ್ ಹಾಕ್ಕೋಳ್ಳಲ್ಲ. ಹೊಸ ವರ್ಷ ಬಂತೂ ಅಂತ ನಾನು ಸೀರೇನಾ ಬಿಡೋಕ್ಕೆ ಆಗುತ್ಯೆ? ಅಂತ ಕೂಗಾಡ್ತಿದಾಳೆ. ಅದಕ್ಕೆ ನಾನು ಆರು ತಿಂಗಳ ಕಾಲ ಶರ್ಟು ಪ್ಯಾಂಟು ಹಾಕಿಕೊಂಡರೆ ಏನು ಆಕಾಶ ಕಳಚಿ ಬೀಳುತ್ಯೆ, ಹಾಕ್ಕೋ, ಅಂತ ಹೇಳೋಣಾ ಅಂತ ಇದ್ದೆ. ಆಮೇಲೆ ಶರ್ಟು ಪ್ಯಾಂಟ್ ನಲ್ಲಿ ಅವಳು ಹೇಗೆ ಕಾಣ್ತಾಳೋ ಅಂತ ಹೆದರಿಕೆ ಆಗಿ ಸುಮ್ಮನಾದೆ. ಈ ಪ್ರಾಬ್ಲಮ್ ಬಗೆಹರಿಸಿದರೇನೆ ಈ ವರ್ಷ ಅಮೇರಿಕಾ ಟ್ರಿಪ್ಪು."

"ಕಷ್ಟ. ಕಷ್ಟ. ಅಂದ ಹಾಗೆ, ನಿಮಗೆ ಹೇಳೋದೇ ಮರೆತುಬಿಟ್ಟೆ. ಮೊನ್ನೆ ಇಲ್ಲೇ ನಮ್ಮ ಹಿರಿಯ ನಾಗರೀಕರ ಕ್ಲಬ್ ನಲ್ಲಿ ಯಾರೋ ಸ್ವಾಮೀಜಿ ಮಾತಾಡ್ತಾ ಏನು ಹೇಳಿದ್ರು ಗೊತ್ತೆ? ವಯಸ್ಸಾದ ನೀವೆಲ್ಲರೂ ಈ ಹೊಸ ವರುಷದಿಂದ ಕ್ಯಾಟರಾಕ್ಟೂ ತೆಗಿಸ್ಕೋಬೇಡಿ, ಹಿಯರಿಂಗ್ ಏಡ್ ನೂ ಹಾಕ್ಕೋಬೇಡೀ ಅಂತ ಬುದ್ದಿ ಹೇಳಿದ್ರು."

"ಯಾಕಂತೆ?"

"ವರ್ಷೇ ವರ್ಷೇ ನಮ್ಮ ಸಮಾಜ ಹಾಳು ಆಗ್ತಾ ಇದೆ. ಈ ವರ್ಷದಲ್ಲಿ ಇನ್ನೂ

ಹೆಚ್ಚು ಹಾಳಾಗೋದರಲ್ಲಿ ಸಂಶಯವೇ ಇಲ್ಲ. ಸುಮ್ಮನೆ ಕ್ಯಾಟರಾಕ್ಟೂ, ಹಿಯರಿಂಗ್ ಏಡ್ ಅಂತ ಸಾವಿರಾರು ರೂಪಾಯಿಗಳನ್ನ ಖರ್ಚು ಮಾಡೋ ಬದಲು ಸೀ ನೋ ಈವಿಲ್, ಹಿಯರ್ ನೋ ಈವಿಲ್ ಅಂತ ತೆಪ್ಪಗೆ ಶಾಂತಿಯಿಂದ ಇರಿ ಅಂತ ಅವರು ಹೇಳಿದ್ದು."

" ಸಧ್ಯ, ಸ್ಪೀಕ್ ನೋ ಈವಿಲ್ ಅಂತ ಬಾಯಿ ಮುಚ್ಚಿಕೊಂಡಿರಿ ಅಂತ ಹೇಳಲಿಲ್ಲವಲ್ಲ?."

" ನಾವೂ ಹಾಗೇನೇ ಕೇಳಿದ್ವಿ. ಅದಕ್ಕೆ ಅವರು ನಿಮ್ಮ ವಯಸ್ಸಿನಲ್ಲಿ ಮಾತೂ ಆಡದೇ ಇದ್ರೆ ನಿಮಗೆ ಬೇರೆ ಇನ್ನೇನು ಮಾಡೋಕ್ಕೆ ಸಾಧ್ಯ? ಹಾಳೂ ಮೂಳೂ ಮಾತಾಡ್ಬೇಡೀ ಅಷ್ಟೇ ಅಂತ ಅಂದ್ರು."


" ವೆಂಕಯ್ಯ, ನನಗೂ ಒಂದೊಂದು ಸಲ ಹಾಗೇ ಅನ್ನಿಸುತ್ತೆ. ಈಗ ನಮ್ಮ ಸಮಾಜ ಯಾವ ದುರ್ಗತೀಗೆ ಇಳೀತಿದೆ ಅಂತ ಅಂದರೆ, 2020 ರಿಂದ ನಮ್ಮಂತವರಿಗೆ ದೇವರು, ದಿಂಡರು, ಅಧ್ಯಾತ್ಮ-ಇವೇ ಗತಿ ಅಂತ ಕಾಣುತ್ತೆ."

"ಅಯ್ಯೋ, ಹಾಗ್ಯಾಕೆ ಈಗಲೇ ನಿಮಗೆ ವೈರಾಗ್ಯ ಬಂತು? ಹೋದ ವರ್ಷ ನೀವು ಸೋತರೂ ದುಡ್ಡು ಕೊಡಲ್ಲ ಅಂತ ಜಗಳ ಆಡಿಕೊಂಡು ನಾವು ಇಸ್ಪೀಟ್ ಆಡೋದು ಬಿಟ್ಟುಬಿಡಲಿಲ್ವೇ? ಈ ವರ್ಷ ಅದನ್ನ ಮತ್ತೆ ಶುರು ಮಾಡೋಣ ಬನ್ನಿ. ಕೈಲಿ ದುಡ್ಡಿಟ್ಕೊಂಡು ಬನ್ನಿ. ಹಾಯಾಗಿ ಕಾಲ ಕಳೆಯೋಣ. ಪ್ರಪಂಚ ಹಾಳಾಯ್ತು"

"ಗುಡ್ ಐಡಿಯಾ ವೆಂಕಯ್ಯ. ಇವತ್ತು ಸಂಜೇನೆ ನಿಮ್ಮ ಮನೇಲೇ ಠಿಕಾಣಿ ಹಾಕೋಣಾ, ಆಯ್ತೇ? "

"ಆಯ್ತು ಬನ್ನಿ. ಆದರೆ ಮನೆಗೆ ಬಂದು ನನ್ನ ಹೆಂಡತಿ ಮುಂದೆ ಹ್ಯಾಪಿ ನ್ಯೂ ಈಯರ್! ಅಂತ ಇನ್ನೊಂದು ಸಲ ಬಾಯಿ ಬಿಟ್ಟೀರಿ, ಜೋಕೆ! ನಾನು ಬರಲೇ?"

■



# ವಸತಿ ಸಮುಚ್ಚಯದ (ವಿ )ರಾಗಗಳು... ______

● ಕೆ.ವಿ.ರಾಜಲಕ್ಷ್ಮಿ

ಇಂಡಿಪೆಂಡೆಂಟ್ ಮನೆಗಳ ವಾಸದ ಸಾಧಕ ಬಾಧಕಗಳಂತೆಯೇ ವಸತಿ ಸಮುಚ್ಚಯದ ವಾಸಿಗರು ಒಮ್ಮೆ, ಕಷ್ಟ,ಮತ್ತೊಮ್ಮೆ ಸುಖ, ಮಗದೊಮ್ಮೆ ಗೊಂದಲ, ಜಿಗುಪ್ಸೆ ಸಕಲ ರಾಗಗಳನ್ನು ಇಷ್ಟವೋ, ಅನಿಷ್ಟವೋ ಅನುಭವಿಸಲೇ ಬೇಕಾದ ಅನಿವಾರ್ಯ. ಅಂತಹ ವಾಸಿಗರ, ಕೆಲವು ರೋಚಕ ಪ್ರಸಂಗಗಳು ಇಕೋ (ಸ್ವಾನುಭವವೂ ಸೇರಿದಂತೆ! )...

*****

ಒಳ್ಳೆ ನಿದ್ದೆ ಹತ್ತಿದ ಸಮಯ –ಮೇಲ್ಮಹಡಿಯಿಂದ ವಿಚಿತ್ರ ಶಬ್ದ, ನಿಯಮಿತ ತಾಳದಲ್ಲಿ. ಮೊದಲೆರಡು ದಿನ ಅರ್ಥವಾಗಲಿಲ್ಲ. ಕುತೂಹಲ ತಡೆಯಲಾಗದೆ ವಿಚಾರಿಸಿದಾಗ ತಿಳಿದದ್ದು, ಆ ಮನೆಯಾಕೆ ಬೆಳಿಗ್ಗೆ ಕೆಲಸಕ್ಕೆ ಹೋಗುವವರು, ಹೀಗಾಗಿ ಅಡುಗೆ ಕೆಲಸಗಳು ಐದಕ್ಕೆ ಶುರು, ನಮಗೆ ಕೇಳುವ ಶಬ್ದ, ನಾರಿಕೇಳವನ್ನು ತುರಿಯುವ ಶಬ್ದ! ತೆಂಗಿಲ್ಲದೆ ತುತ್ತೆತ್ತದ ಪ್ರದೇಶದವರು. ಈಗ ಎಷ್ಟು ಹೊಂದಿಕೊಂಡಿರುವೆವೆಂದರೆ, ತುರಿಯುವ ಶಬ್ದ ಕೇಳಿದರೆ ಬೆಳಗಿನ ಐದೂವರೆ ಆಸುಪಾಸು –ಅಲಾರಾಂ ಬೇಡ. ಶಬ್ದವಿಲ್ಲವೆಂದರೆ ಅಂದು ರಜೆ ಇರುತ್ತದೆ.

*****

ಇನ್ನೊಬ್ಬ ಸಂಗೀತ ಪ್ರೇಮಿಯ ಕಥೆ ಕೇಳಿ– ಹಾಡುಗಾರನಾಗಬೇಕೆಂಬ ಆಶಯದಿಂದ ಉಚ್ಚ ಸ್ಥಾಯಿಯಲ್ಲಿ ಅಭ್ಯಾಸ ಶುರುಮಾಡಿದ್ದೆ ತಡ, ಅಕ್ಕಪಕ್ಕದವರ ನಿದ್ದೆ ಹಾರಿ ಹೋಗಿತ್ತು. ಕೊನೆಗೆ ಅವನ ಉಪಟಳ ಅಂತ್ಯ ಕಂಡದ್ದು ವಾಸಿಗರ ಕ್ಷೇಮಾಭಿವೃದ್ಧಿ ಸಂಘದವರು,ಈ ಹಾಡುಗಾರನಿಗೆ 'ಅಕ್ಕಪಕ್ಕದವರನ್ನು ಮನಸ್ಸಲ್ಲಿಟ್ಟುಕೊಂಡು ಅಭ್ಯಾಸ ಮುಂದುವರೆಸು ಇಲ್ಲ ಜಾಗ ಖಾಲಿ ಮಾಡು' ಎಂದು ಸೂಚಿಸಿದಾಗ!

*****

ಎಂಟು ಮನೆಗಳಿಗೆ ನಡುವೆ ಮೊಗಸಾಲೆ. ಅದನ್ನು ಎಲ್ಲ ಮನೆಯವರು ಓಡಾಡಲು ಬಳಸುವ ಜಾಗ. ಅಲ್ಲಿ ಮಕ್ಕಳ ಕೇಕೆ, ಕುಣಿತ, ಆಟದ ಕಾರ್, ಸೈಕಲ್‌ಗಳನ್ನೂ ರಭಸವಾಗಿ ಬಿಡುತ್ತಾ ಗದ್ದಲ ಮುಗಿಲಿಗೇರಿಸಿತ್ತು. ಫ್ಲಾಟ್ನಲ್ಲಿ ವಾಸಿಸುತ್ತಿದ್ದ ಮಧ್ಯ ವಯಸ್ಕ ಹೆಂಗಸು, ಹೊರಕ್ಕೆ ತಲೆ ಇಣುಕಿ ಈ ಜಾಗದಲ್ಲಿ ರಾದ್ಧಾಂತ ಮಾಡಬೇಡಿ ತೊಂದರೆಯಾಗುತ್ತೆ ಎಂದ ಕೂಡಲೇ ಆಟವಾಡುತಿದ್ದ ಮಗುವೊಂದರ ಮಾತೆ, ಮಕ್ಕಳಲ್ಲವೇ ಆಂಟಿ? ಆಡಿಕೊಳ್ಳಲಿ ಬಿಡಿ, ಬೇರೆಲ್ಲಿ ಹೋದಾರು? ಎಂದು ಸಮರ್ಥಿಸಿಕೊಂಡಾಗ ಪ್ರಶ್ನಿಸಿದವರಿಗೆ ಸಹನೆಯೊಡೆದು ನಿಮ್ಮ ಮಕ್ಕಳನ್ನು ಮನೆಯೊಳಗೇ ಆಡಿಸಿಕೊಳ್ಳಿ ಇಲ್ಲಿ ವಾಸಿಸುವವರಲ್ಲಿ, ರೋಗಿಗಳು, ವಯೋವೃದ್ಧರು, ಎಳೆ ಮಕ್ಕಳು ಎಲ್ಲರೂ ಇದ್ದಾರೆ, ಮಕ್ಕಳಾಟ ನೆರೆಯವರಿಗೆ ಕಿರಿಕಿರಿ ಆಗಬಾರದು ಎಚ್ಚರವಿರಲಿ ಎಂದು ಗುಟುರು ಹಾಕಿ ಇದು ಹೀಗೇ ಮುಂದುವರೆದರೆ ಸೊಸೈಟಿ ಗಮನಕ್ಕೆ ತರಬೇಕಾಗುತ್ತದೆ ಎಂದಾಗ ಮಕ್ಕಳೆಲ್ಲ ಗೂಡು ಸೇರಿದರು.

ಇನ್ನೊಂದು ಕಾಮನ್ ಫ್ಲೋರ್ ನಲ್ಲಿ ಪೋರನೊಬ್ಬ ರಬ್ಬರ್ ಹಾವನ್ನು

ಹಿಡಿದುಕೊಂಡು ಕೆಲ ಮಕ್ಕಳಿಗೆಲ್ಲ ಹೆದರಿಸಿ ಸಂಭ್ರಮಪಡುತ್ತಿದ್ದ ; ಅತಿವೇಗವಾಗಿ ರೇಡ್‌ಆನ್ ನಲ್ಲಿ ಆಡುತ್ತಿದ್ದವ ಮಗದೊಬ್ಬ .ಇವರನ್ನು ಕಾಯುವವರು ಯಾರೂ ಇಲ್ಲ. ಅಕಸ್ಮಾತ್ ಆಯತಪ್ಪಿ ಮೆಟ್ಟಿಲುಗಳಿಂದ ಬಿದ್ದರೆ ಅನಾಹುತ ಮಕ್ಕಳಿಗೆ, ಕೆಟ್ಟ ಹೆಸರು ವಸತಿ ಸಮುಚ್ಛಯಕ್ಕೆ. 'ಮರದಿಂದ ನೇರ ಇಲ್ಲೇ ಇಳಿದಿವೆ, ಮರ್ಕಟ ಮುಂಡೇವು, ಒಂದು ಗಳಿಗೆ ಶಾಂತಿ ಇಲ್ಲ ' ಗೊಣಗಿ ಸುಮ್ಮನಾದರು ಮದ್ಯಾನ್ಹದ ನಿದ್ರಾ ವಂಚಿತ ವೃದ್ಧರೊಬ್ಬರು.

ಮೊನ್ನೆ ನನ್ನ ಗೆಳತಿಯ ಕಾರಿನ ವೈಪರ್ ಮಕ್ಕಳ ತುಂಟಾಟಕ್ಕೆ ಬಲಿಯಾಗಿ, ಅದು ಗಮನಕ್ಕೆ ಬಂದ ಸೆಕ್ಯೂರಿಟಿ, ಕಿತ್ತ ವೈಪರನ್ನು ಕೈಗಿತ್ತು, ಫ್ಲಾಟ್ ಸಂಖ್ಯೆಯನ್ನೂ ಹೇಳಿ, 'ನಾನು ಹೇಳಿ ಬಂದಿದ್ದೀನಿ, ನೀವು ಹೋಗಿ ಮಾತನಾಡಿ' ಎಂದನಂತೆ. ಅದರಂತೆ ಆ ಮನೆಗೆ ಹೋದರೆ, "ಹೌದು, ಏನು ಮಾಡುವುದು? ಮಕ್ಕಳಿಗೆ ಎಷ್ಟು ಹೇಳಿದರೂ ತಿಳಿಯೋಲ್ಲ, ಅದರ ವೆಚ್ಚ ಭರಿಸುತ್ತೇವೆ ಎಂದು ಮಕ್ಕಳ ಘನಕಾರ್ಯವನ್ನು ವಹಿಸಿಕೊಂಡಾಗ ಇನ್ನಷ್ಟು ಕೆಂಡವಾಗಿದ್ದಳು.

ಇನ್ನೊಬ್ಬರ ದ್ವಿಚಕ್ರವಾಹನ ಆಸೀನಗಳ ಮೇಲ್ಮೈಯನ್ನು ಪಿನ್ನಿನಿಂದ ಗೀರಿ ತರಿತರಿಯಾಗಿಸಿತ್ತು ಮತ್ತೊಂದು ಮಕ್ಕಳ ಸೈನ್ಯ. ಸೌಜನ್ಯಕ್ಕಾದರೂ ಕ್ಷಮೆಯಾಚಿಸದೇ, ಮಕ್ಕಳೆದುರು ಈ ರೀತಿ ವರ್ತಿಸಿದರೆ ಮಕ್ಕಳು ಒಳಿತನ್ನು ಕಲಿಯಲು ಸಾಧ್ಯವೆ ? ಎಂಬುದು ಅವಳ ಪ್ರಶ್ನೆ.

*****

ಐದು ನಿಮಿಷದ ಮೊದಲು ಶುಭ್ರಗೊಳಿಸಿದ್ದ ಬಾಲ್ಕನಿ ತೇವ ಕಂಡಾಗ ಗಾಬರಿಯಾಯಿತು. ನೀರು ಎಲ್ಲಾದರೂ ಲೀಕ್ ಆಗ್ತಿದೆಯೇ ಮತ್ತೆ ರಿಪೇರಿಗೆ ಸುರಿಯಬೇಕೆಂಬ ಅಂಜಿಕೆ. ಸಂಶಯಗೊಂಡು ಸ್ವಲ್ಪ ಕಣ್ಣುಹಾಯಿಸಿದಾಗ ಕಂಡದ್ದು ಮೇಲ್ಗಡೆ ಮನೆಯಿಂದ ಜಿನುಗುತ್ತಿರುವ ನೀರ ಹನಿ. ಸಂಪೂರ್ಣ ತಲಾಶ್ನಲ್ಲಿ ಗೊತ್ತಾಗಿದ್ದು ಕೈಯಲ್ಲೇ ಹಿಂಡಿದ ಬಟ್ಟೆಗಳನ್ನು ಹರವುವ ಮೊದಲು ಬಾಲ್ಕನಿಗೋಡೆಗೆ ಬಟ್ಟೆಗಳನ್ನು ಇಳಿಬಿಟ್ಟ ಪರಿಣಾಮ ಬಟ್ಟೆಯ ನೀರು ಗೋಡೆಯಿಂದಿಳಿದು ನಮ್ಮ ಬಾಲ್ಕನಿಯನ್ನು ತೇವಗೊಳಿಸುತಿತ್ತು. ನಂತರ ಅವರ ಗಮನಕ್ಕೆ ತಂದು ಎಚ್ಚರಿಸಿದೆವೆನ್ನಿ. ಮತ್ತೊಂದು ಪ್ರಸಂಗದಲ್ಲಿ. ಕಂಬಿಯಲ್ಲಿ ಒಣಗಿಸಿದ್ದ ಬಟ್ಟೆಗಳು ಮುಕ್ಕಾಲು ಒಣಗಿದ್ದು ಪುನಃ ತೇವಗೊಂಡಿತ್ತು. ಮಳೆಯಿಲ್ಲ ಆದರೂ ಒದ್ದೆಯಾದದ್ದು ಹೇಗೆ ಎಂಬ ಯಕ್ಷ ಪ್ರಶ್ನೆಗೆ ಉತ್ತರ ಸಿಕ್ಕಿತ್ತು. ಮೇಲಿನ ಮನೆಯವರ ಸಸ್ಯ ಪ್ರೇಮ !ಪ್ಯಾರಾಫಿಟ್ ವಾಲ್ ಮೇಲಿರಿಸಿದ್ದ ಸಸ್ಯಕುಂಡಗಳಿಗೆ ನೀರುಣಿಸುವ ಸಂಭ್ರಮದಲ್ಲಿ, ಅಧಿಕವಾದ ನೀರು ಹೊರಚೆಲ್ಲಿ ಒಣಗಿದ ಬಟ್ಟೆಗಳನ್ನೂ ಮುತ್ತಿಟ್ಟಿತ್ತು. ಮತ್ತೆ ಯಥಾ ಪ್ರಕಾರ 'ನಿಮ್ಮ ಸಸ್ಯ ಪ್ರೇಮವನ್ನು ಮನೆಯೊಳಕ್ಕೆ ಇರಿಸಿಕೊಳ್ಳಿ' ಎಂದು ಸಲಹಿದೆವು.

*****

ಆಡಲು ಮೀಸಲಾದ ಜಾಗದಲ್ಲಿ, ನಿಗದಿತ ಸಮಯದಲ್ಲಿ ಆಡುವುದು ಚಿಕ್ಕ ಮಕ್ಕಳಾದರೆ ಹಿರಿಯರ ಮೇಲ್ವಿಚಾರಣೆಯಲ್ಲಿ ಆಟೋಟಗಳನ್ನು ನಡೆಸಿದರೆ ಯಾರಿಗೂ ತೊಂದರೆ ಇರದು. ಬದಲಿಗೆ ಟೆರೇಸ್ನಲ್ಲೋ, ವಾಹನಗಳನ್ನು ನಿಲ್ಲಿಸುವ ಜಾಗಗಳನ್ನೇ ಆಟದ ಅಡ್ಡೆಯಾಗಿಸಿಕೊಂಡರೆ ಅಶಿಸ್ತು ಮೈಗೂಡುವುದರ ಜೊತೆಗೆ ಅವಗಡಗಳಿಗೂ

ನಾಂದಿ. ಮೈದಾನದಲ್ಲಿ ಆಡಬೇಕಾದ ಕ್ರಿಕೆಟ್ ಆಟವನ್ನು ಒಳ ರಸ್ತೆಗಳಲ್ಲೋ, ಇಲ್ಲ ಚಿಕ್ಕ ಆವರಣದಲ್ಲೋ ಆಡಿ ಮನೆ ಕಿಟಕಿಗಳ ಗಾಜು ಒಡೆದು ಕಂಗಾಲಾಗಿ ಕ್ಷಣಮಾತ್ರದಲ್ಲಿ ಕಾಣೆಯಾಗುವ ಬಾಲಕರ ಗುಂಪೂ ಕಾಣಸಿಗುತ್ತದೆ. ಇತ್ತೀಚಿಗೆ ಬ್ಯಾಟಿನಿಂದ ಹೊಡೆಸಿಕೊಂಡ ಚೆಂಡು, ಸುರಕ್ಷಣೆಗಾಗಿ ಅಳವಳಿಸಿದ್ದ ಸಿ.ಸಿ.

ಕ್ಯಾಮೆರಾವನ್ನು ಛಿದ್ರಗೊಳಿಸಿತ್ತು. ಮನೆಮಾಲೀಕರಿಗೆ ನೋಟಿಸ್ ಮತ್ತು ದಂಡ! ಇವೆಲ್ಲ ಆಲ್ ಇನ್ ದಿ ಗೇಮ್ !

ಇನ್ನು ಸಾಕುನಾಯಿ ಪ್ರೀತಿಯ ಬಗ್ಗೆ ಹೇಳಲೇ ಬೇಕು. ಅತಿಥಿ ಅಭ್ಯಾಗತರನ್ನು ಬೊಗಳಿ, ಹೆದರಿಸಿಯೇ ಸ್ವಾಗತಿಸುವುದು.ಏನೂ ಮಾಡೋಲ್ಲ ನೀವು ಬನ್ನಿ ಎಂದುನಾಯಿಯನ್ನು ಕಟ್ಟಿಯೂ ಹಾಕದೆ ಮಾಲೀಕರು/ ಅತಿಥೇಯರು ದೇಶಾವರಿ ನಗೆಬೀರಿದ ಮಾತ್ರಕ್ಕೆ ಭಯ ಹೋದೀತೆ ? ಮಂದಿ ನಡೆಯುವ ಜಾಗದಲ್ಲಿ ವಾಕಿಂಗ್ ಗೆ ಬಿಟ್ಟಿದ್ದೆ ಕಾರಿಡಾರಿನಲ್ಲಿ ಎಂದು ಹಲ್ಕಿರಿವ ನಾಯಿ ಮಾಲೀಕರಿಗೆ ತಾವು ಮಾಡುವ ಕೆಲಸ ಇತರರಿಗೆ ಪೀಡನ' ಎಂದು ಅರಿವಾಗುವುದು ಎಂದೋ?


*****

ಇನ್ನು ಎದಿರು ಬದಿರು ಬಾಲ್ಕನಿಗಳಿರುವ ಕಡೆ ಇನ್ನೊಂದು ಬಗೆಯ ರೋಧನೆ ;

ಬಾಲ್ಕನಿಯಲ್ಲಿ (ಕೆಲವೊಮ್ಮೆ ಸಿಗ್ನಲ್ ಸಲುವಾಗಿ ) ಮೊಬೈಲುಗಳಲ್ಲಿ ಖಾಸಗಿ, ವೈಯಕ್ತಿಕ ಕರೆಗಳನ್ನು ಮೇಲುದನಿಯಲ್ಲಿ ಮಾತನಾಡುವುದು... ಫೋನಿನ ಕೇಳುಗನಿಗೆ ಬೈಗುಳದ ಅರ್ಚನೆಯಾಗುತ್ತಿದ್ದರೆ, ವಸ್ತುತಃ (ಅನಿವಾರ್ಯವಾಗಿ) ಕೇಳಿಸಿಕೊಳ್ಳುವ ಯಾತನೆ! ಕೆಲವೊಮ್ಮೆ ವಿಶ್ರಮಿಸುತ್ತಿರುವ ಸಮಯದಲ್ಲಿ ಇಂತಹ ಬಾಲ್ಕನಿವಾಣಿಗಳು ಬೆಚ್ಚಿಬೀಳಿಸುತ್ತವೆ.ಇವು ಫೋನಿನ ಮಾತಿಗಷ್ಟೇ ಸೀಮಿತವಾಗಿರುವುದಿಲ್ಲ– ಮನೆಯೊಳಗಿನ ಜೋರುಮಾತಿನ ಜಗಳಗಳಿಗೂ ಅನ್ವಯಿಸುತ್ತದೆ–

*****

ಎಷ್ಟೇ ಅವಾಂತರಗಳಿದ್ದರೂ ಸಮುಚ್ಚಯದ ಎಲ್ಲ ವಾಸಿಗರು ಕಲೆತು ಒಟ್ಟಾಗಿ ಒಂದಾಗಿ ಆಚರಿಸಿ ಸಂಭ್ರಮಿಸುವ ಹಬ್ಬಗಳು, ಸಡಗರಗಳು, ಕಷ್ಟವೆಂದರೆ ಕೈನೀಡಿ ಸಹಾಯ ನೀಡುವ ಮಂದಿ, ಇವುಗಳನ್ನು ನೆನೆವಾಗ ವಸತಿ ಸಮುಚ್ಚಯದ ವಾಸ ಸುಭದ್ರತಾ ಭಾವ ಮೂಡುವುದಂತೂ ನಿಜ. ■



● ವಸುಮತಿ ಉಡುಪ

ನಟ್ಟ ನಡು ಮಧ್ಯಾಹ್ನ. ಅಡುಗೆಮನೆಯ ನಾಲ್ಕು ಗೋಡೆಗಳ ನಡುವಿನಿಂದ ಕಳಚಿಕೊಂಡು ಧ್ಯಾನಸ್ಥ ಲೋಕದ ಚಿಪ್ಪಿನೊಳಗೆ ಹುದುಗಿರುವ ಸಮಯ. ಕ್ಷಮಿಸಿ, ಹೇಳಬೇಕಾದ್ದನ್ನು ನೇರವಾಗಿ ಹೇಳದೆ ಅತಿರಂಜಿತವಾಗಿ ವರ್ಣಿಸಲೆಳಸುವುದು ನಮ್ಮಂತವರ ಜಾಯಮಾನ. ಹಾಗೆ ಹೇಳಿದರೆ ಬುದ್ಧಿವಂತಿಕೆಗೆ ಕೋಡು ಮೂಡಿದಂತೆ ಎನ್ನುವ ಭ್ರಮೆ. ಸರಳವಾಗಿ ಎಂತವರಿಗೂ ಅರ್ಥವಾಗುವಂತೆ ಹೇಳಬಹುದಾದ್ದನ್ನು ಕೆಲವರು ಅದೆಷ್ಟು ಕ್ಲಿಷ್ಟ ಪದಗಳಲ್ಲಿ ಪೋಣಿಸಿ ಬರಹಕ್ಕಿಳಿಸುತ್ತಾರೆಂದರೆ ಒಂದು ಸಲ ಓದಿದರೆ ದೇವರಾಣೆ ಅರ್ಥವಾಗುವುದು ಕಷ್ಟ. ಸುಲಿದ ಬಾಳೆಯಹಣ್ಣಿನಂತಿರುವ ಕನ್ನಡ 'ಹೀಗೂ ಉಂಟೇ?' ಎಂದು ಆಶ್ಚರ್ಯಪಡುವಷ್ಟು ಕಠಿಣಪದಗಳ ಜೋಡಣೆಯಾಗಿಬಿಟ್ಟಿರುತ್ತದೆ. ಬಿಡಿ, ಪ್ರಸ್ತುತಕ್ಕೆ ಈ ವಿಷಯ ಸಂಬಂಧವಿಲ್ಲದ್ದು. ಇಷ್ಟರಲ್ಲಿ ನಿಮಗೆ ನನ್ನ ಬಗ್ಗೆ ಅಷ್ಟಿಷ್ಟು ಅರಿವಾಗಿರಬಹುದು. ನಿಮ್ಮ ಊಹೆ ಸತ್ಯ. ಆಗೀಗ ಕತೆಯನ್ನೋ, ಕವನವನ್ನೋ ಬರೆಯುವ ಹವ್ಯಾಸ ನನಗಿದೆ. ಸಂಪಾದಕ ಮಹಾಶಯರಿಂದ ಸ್ವೀಕೃತವಾದಲ್ಲಿ ಪ್ರಕಟಣೆಯ ಭಾಗ್ಯ ಕಾಣುವುದಿದೆ. ಈ ಕಾರಣದಿಂದ ನಾನೊಬ್ಬ ಲೇಖಕಿ ಎಂದು ಕೆಲವರು ಗುರ್ತಿಸುತ್ತಾರೆಂದು ವಿನಮ್ರತೆಯಿಂದ ನಿವೇದಿಸಿಕೊಳ್ಳುತ್ತಾ ಮುಂದುವರಿಯುತ್ತೇನೆ. ಈ ವಿಷಯ ತಮ್ಮಗಳ ಅವಗಾಹನೆಗೆ ತರದಿದ್ದಲ್ಲಿ ನಾನು ಹೇಳಬೇಕೆಂದಿರುವುದನ್ನು ಹೇಳಲಾಗುವುದಿಲ್ಲ. ಆದ್ದರಿಂದ ಹೀಗೆ ಹೇಳಬೇಕಾಗಿ ಬಂದಿರುವುದು ಅನಿವಾರ್ಯ. ಮೂಗಿಗಿಂತಾ ಮೂಗುತಿ ಭಾರವಾಗುವುದು ಬೇಡ. ವಿಷಯಕ್ಕೆ ಬರೋಣ. ಎಲ್ಲಿಂದ ಶುರುಮಾಡಿದ್ದೆ? 'ಧ್ಯಾನಸ್ಥ ಲೋಕದ ಚಿಪ್ಪಿನೊಳಗೆ..' ಎಂಬಲ್ಲಿಂದ ಅಲ್ಲವೇ? ಏನಾದರೂ ಬರೆಯಲೇಬೇಕೆಂಬ ಪಿತ್ಥ ನೆತ್ತಿಗೇರಿ ಎಡಗೈಲೊಂದು ಎಕ್ಸರ್‌ಸೈಜ್ ಪುಸ್ತಕ, ಬಲಗೈಯಲ್ಲಿ ಪೆನ್ನು ಹಿಡಿದು ಕೂತಿದ್ದ ಈ ಹೊತ್ತಿನಲ್ಲಿ, ನಮ್ಮ ಮಲೆನಾಡ ಭಾಷೆಯಲ್ಲಿ ಹೇಳುವುದಾದರೆ ಒಂದು ಕಾಗೆ ಕೂಡಾ ಕರ್‍ರ್ ಅನ್ನದ ನಡುಮಧ್ಯಾಹ್ನದ ಹೊತ್ತಿನಲ್ಲಿ, ಕಾಲಿಂಗ್‌ಬೆಲ್ ದೀರ್ಘವಾಗಿ ಟ್ರಿಣ್‌ಗುಟ್ಟಿತು. ಧ್ಯಾನಭಂಗವಾಯ್ತು. ಆಶ್ಚರ್ಯವೂ ಆಯ್ತು. ಆಶ್ಚರ್ಯ ಯಾಕೆಂದರೆ ದಶಕಗಳಿಂದ ಬೇರು ಬಿಟ್ಟಿದ್ದ ಊರಿನಿಂದ ಬೇರು ಕಿತ್ತುಕೊಂಡು ಬಂದು ಹೊಸ ಊರಿನಲ್ಲಿ ಇತ್ತೀಚೆಗೆ ನೆಲೆಯೂರಿದವರು ನಾವು. ಆಸುಪಾಸಿನ ಮನೆಯವರ ಪರಿಚಯ ಕೂಡಾ ಬೆಳೆದಿಲ್ಲ. ಹೀಗಿರುವಾಗ..

ಯಾರೋ ಸೇಲ್ಸ್‌ಮನ್‌ಗಳು, ಅವರು ಬರುವುದೇ ಇಂತಾ ಹೊತ್ತಿನಲ್ಲಿ ಎಂದು ನಿಮ್ಮಂತೆ ನನಗೂ ಅನಿಸಿದ್ದು ಹೌದಾದರೂ ಮೊದಲಂತಸ್ತಿನಲ್ಲಿರುವ ನಮ್ಮ ಮನೆಗೆ ಅಂತವರು ಬರುವ ಸಂಭವ ಕಮ್ಮಿ. ಬಾಗಿಲ ಬದಿಯ ಕಿರುಕಿಟಕಿಯಲ್ಲಿ ಇಣುಕಿದೆ. ಶಿಸ್ತಾಗಿ ಸಿಂಗರಿಸಿಕೊಂಡ ನಾಲ್ವರು ಮಹಿಳೆಯರು. ಅಪರಿಚಿತರನ್ನು ಕಂಡು ಕೊಂಚ ಕುತೂಹಲದಿಂದ, ಕೊಂಚ ಹಿಂಜರಿಕೆಯಿಂದ, ಒಳಕೋಣೆಯಲ್ಲಿ ರಾಯರು 'ಪವಡಿಸು ಪರಮಾತ್ಮನೇ..' ಆಗಿರುವ ಧೈರ್ಯದಿಂದ ಬಾಗಿಲು ತೆಗೆದೆ.

ಬಂದವರು ವಿಶ್ವಾಸದ ನಗೆ ಬೀರಿ ನಮಸ್ಕರಿಸಿದರು. "ನೀವು ಈ ಇವರಲ್ಲವಾ?" ಎಂದು ನನ್ನ ಹೆಸರು ಹೇಳಿ ಬೆರಗುಗೊಳಿಸಿದರು.

"ನಿಮಗೆ ಹೇಗೆ ಗೊತ್ತಾಯ್ತು?" ಕೇಳಿದೆ.

"ನಿಮ್ಮ ಹೆಸರು ಯಾರಿಗೆ ಗೊತ್ತಿಲ್ಲ? ಪೇಪರು ಗೀಪರಲ್ಲಿ ಕತೆ, ಕವನ ಬರೀತೀರಿ ಅಂದಮೇಲೆ.." ಅಟ್ಟ ಹತ್ತಿಸಿದರು. ಹತ್ತುವಂತಾ ಸಂದರ್ಭ ಕೂಡಾ. ಗುರುತು ಪರಿಚಯವಿರದ ಊರಿನಲ್ಲಿ ತನ್ನ ಹೆಸರಿನಿಂದ ಗುರ್ತಿಸುತ್ತಿದ್ದಾರೆಂದ ಮೇಲೆ ನರಮನುಷ್ಯಳಾದ ನಾನು ಒಂದಿಷ್ಟು ಬೀಗಿದರೆ ತಪ್ಪೇನಿದೆ?

"ಬನ್ನಿ, ಕೂತ್ಕೊಳ್ಳಿ.."

ಬಂದವರು ಸೋಫಾದ ಮೇಲೆ ಆಸೀನರಾದರು.

"ನಾನು ನಾನೇ ಅಂತ ಹ್ಯಾಗೆ ಗೊತ್ತಾಯ್ತು?" ಕೇಳಿದೆ. ಪೆದ್ದುಪ್ರಶ್ನೆಯಂತೆ ಅನಿಸುತ್ತಿದೆಯೇ? ಇರಬಹುದು. ನಾನು ಸ್ವಲ್ಪ ದಡ್ಡಿಯೇ.

"ಆ ಪೇಪರಿನಲ್ಲಿ ನಿಮ್ಮ ಕತೆ ಜೊತೆ ನಿಮ್ಮ ಫೋಟೋ ಬಂದಿತ್ತಲ್ಲ, ನೀವು ಇಲ್ಲೇ ಇರೋದು ಅಂತ ಇವಳು ಹೇಳಿದ್ಲು.."

ಈ ಲೋಕಾಭಿರಾಮ, ಕಾಫಿಯ ಉಪಚಾರದ ಕಾರ್ಯಕ್ರಮವನ್ನು ವಿವರವಾಗಿ ವರ್ಣಿಸಿ ನಿಮ್ಮ ತಲೆ ತಿನ್ನುವುದು ನನ್ನ ಉದ್ದೇಶವಲ್ಲ. ಈ ಹೆಣ್ಣುಮಕ್ಕಳು ಒಂದು ಸಾಂಸ್ಕೃತಿಕಸಂಘ ಮಾಡಿಕೊಂಡು ಆಗೀಗ ವಿವಿಧ ಕಾರ್ಯಕ್ರಮಗಳನ್ನು ನಡೆಸಿ ಸಂಘಕ್ಕೆ ಜನಮನ್ನಣೆ, ಪ್ರತಿಷ್ಠೆ ಗಳಿಸಿಕೊಟ್ಟಂತವರು. ಒಬ್ಬ ಲೇಖಕಿ ತಮ್ಮ ಬಡಾವಣೆಗೆ ಬಂದಿರುವಾಗ ಅವರನ್ನು ಗುರ್ತಿಸಿ ಸತ್ಕರಿಸಬೇಕಾದ್ದು ಅವರ ಸಾಮಾಜಿಕ ಜವಾಬ್ದಾರಿ. ಒಂದು ಕಾರ್ಯಕ್ರಮ ಹಮ್ಮಿಕೊಂಡು ನನ್ನನ್ನು ಸನ್ಮಾನಿಸಬೇಕೆಂದು ಅವರ ಸದಿಚ್ಛೆ.

"ಬೇಡ, ಬೇಡ. ನಾನೇನು ದೊಡ್ಡ ಲೇಖಕಿ ಅಲ್ಲ.." ಸತ್ಯ ಹೇಳಿದೆ.

"ಅದನ್ನ ನಾವು ಹೇಳ್ಬೇಕಾದೋರು.." ಅಂದರು.

"ನಂಗೆ ಭಾಷಣ ಗೀಷಣ ಮಾಡೋಕೆ ಬರಲ್ಲ.." ಪ್ರಾಮಾಣಿಕವಾಗಿ ಹೇಳಿದೆ.

"ಎರಡೇ ಎರಡು ಮಾತಾಡಿ, ಸಾಕು.." ಇದೊಂಥರಾ ಅಡಕತ್ತರಿ. ಇಷ್ಟು ವಿಶ್ವಾಸದಿಂದ ಕರೆಯುತ್ತಿರುವಾಗ ಕಡ್ಡಿ ಮುರಿದಂತೆ ನಿರಾಕರಿಸುವುದು ಸಭ್ಯತೆಯ ಲಕ್ಷಣವಲ್ಲ. ಬದಲಿಗೆ 'ಜಂಭ' ಎನ್ನುವ ತಪ್ಪು ತಿಳಿವಳಿಕೆಗೆ ಕಾರಣವಾದೀತು. 'ಇಂತಾ ದಿನ, ಇಂತಾ ಹೊತ್ತು, ಬಂದು ಕರೆದುಕೊಂಡು ಹೋಗುತ್ತೇವೆ' ಎನ್ನುವ ಮಾತಾಡಿ ಬಂದವರು ಜಾಗ ಖಾಲಿ ಮಾಡಿದರು ಎಂಬಲ್ಲಿಗೆ ಮೊದಲ ಅಂಕ ಮುಕ್ತಾಯ.

*****

ಹೇಳಿದ ದಿನ, ಹೇಳಿದ ಸಮಯಕ್ಕೆ ಬಂದು ಇಬ್ಬರು ಮಹಿಳಾಮಣಿಗಳು ನನ್ನನ್ನು ಕಾರ್ಯಕ್ರಮ ನಡೆಯುವಲ್ಲಿಗೆ ಕಾರಿನಲ್ಲಿ ಕರೆದೊಯ್ದರು. ಆಗಿನ್ನೂ ಕಸಗಿಸ ಗುಡಿಸಿ, ಕುರ್ಚಿ, ಮೇಜು ಜೋಡಿಸಿ, ಮೇಲುಹೊದಿಕೆಯಿಂದ ಅಲಂಕರಿಸಿ ಕಾರ್ಯಕ್ರಮ ನಡೆಸುವ ತಯಾರಿ ಆರಂಭವಾಗಿತ್ತು. ಅದಕ್ಕೇನು ನನ್ನ ತಕರಾರಿಲ್ಲ. ಹೇಳಿದ ಸಮಯಕ್ಕೆ

ಕಾರ್ಯಕ್ರಮ ಆರಂಭವಾದರೇ ಆಶ್ಚರ್ಯ ಪಡಬೇಕು. ಎದುರು ಸಾಲಿನ ಒಂದು ಕುರ್ಚಿಯಲ್ಲಿ ಕೂತು ಅಲ್ಲಿ ಓಡಾಡುತ್ತಿದ್ದ ಮಹಿಳೆಯರ ಸಂಭ್ರಮಕ್ಕೆ ಸಾಕ್ಷಿಯಾದೆ. ಇದು ನನಗೋಸ್ಕರ ನಡೆಯುತ್ತಿರುವ ಕಾರ್ಯಕ್ರಮ ಎಂದು ಒಳಗೊಳಗೆ ಹೆಮ್ಮೆ.

ಹೇಳಿದ ಸಮಯಕ್ಕಿಂತಾ ಒಂದು ಘಂಟೆ ತಡವಾಗಿ ಆರಂಭವಾಯ್ತು ಕಾರ್ಯಕ್ರಮ. ದೇವರನಾಮದಿಂದ ಆರಂಭಗೊಂಡು ಸ್ವಾಗತ ಭಾಷಣ, ಸನ್ಮಾನಿತೆಯೇ ಬರೆದುಕೊಟ್ಟ ಪರಿಚಯದವರೆಗೆ ಎಲ್ಲಾ ಯಥಾಸಾಂಗವಾಗಿ ನಡೆಯಿತು. ವೇದಿಕೆಯ ಎದುರಲ್ಲಿ ಕುರ್ಚಿ ಇಟ್ಟು, ಸನ್ಮಾನಿತೆಯನ್ನು ಕೂರಿಸಿ, ಶಾಲು ಹೊದಿಸಿ, ಹಾರ ಹಾಕಿ, ಹೂವುಹಣ್ಣುಗಳೊಂದಿಗೆ ನೆನಪಿನ ಕಾಣಿಕೆ ಕೈಗೆ ಹಿಡಿಸಿ, ಎಲ್ಲಾ ಚೆನ್ನಾಗೇ ಇತ್ತು. ಕಾರ್ಯಕ್ರಮಕ್ಕೆ ಸಾಕ್ಷಿಯಾಗಲು ಹೆಚ್ಚು ಜನ ಬರದಿದ್ದರೂ ಚಪ್ಪಾಳೆ ಸದ್ದು ಜೋರಾಗಿತ್ತು. ಸಂಘದ ಅಧ್ಯಕ್ಷೆ ತಮ್ಮ ಭಾಷಣದಲ್ಲಿ ಲೇಖಕಿಯನ್ನು ಮತ್ತೊಮ್ಮೆ ಅಟ್ಟ ಹತ್ತಿ ಕೂರಿಸಿದರು. ಮತ್ತು ಈ ಕಾರ್ಯಕ್ರಮದ ಕುರಿತು ತಮ್ಮ ಮನದಾಳದ ಮಾತುಗಳನ್ನು ನೆರೆದವರೊಂದಿಗೆ ಪ್ರಾಮಾಣಿಕವಾಗಿ ಹಂಚಿಕೊಂಡರು. ಅವರು ಹೇಳಿದ್ದೇನು ಅಂದರೆ, ಹೇಳಿದ್ದೇನು ಅಂದರೆ, ಅವತ್ತು ವೇದಿಕೆಯ ಮೇಲೆ ಕೂತಾಗ ಉಗುಳು ನುಂಗಿಕೊಂಡಂತೆ ಮತ್ತೊಮ್ಮೆ ತಮ್ಮೆದುರು ಇದನ್ನೆಲ್ಲಾ ಹಂಚಿಕೊಳ್ಳಲು ಹಿಂಜರಿಕೆಯಂತಾದ್ದೇನೋ ಕಾಡುತ್ತಿದೆ. ಇರಲಿ, ಸತ್ಯ ಹೇಳಲು ಹಿಂಜರಿಕೆ ಯಾಕೆ? ಆಕೆ ಓತಪ್ರೋತವಾಗಿ ಮಾಡಿದ ಭಾಷಣವನ್ನೂ ಇಲ್ಲಿ ಉದ್ಧರಿಸಬೇಕಾಗಿಲ್ಲ. ಆದರೆ ಅದರಲ್ಲಿ ಪ್ರಸ್ತಾಪವಾದ ಸಂಗತಿಯೊಂದನ್ನು ತಮ್ಮ ಕಿವಿ ತಲುಪಿಸುತ್ತೇನೆ. ಹಿಂದೊಮ್ಮೆ ಈ ಊರಿಗೆ ನನ್ನಂತೆ ಒಬ್ಬ ಲೇಖಕಿ ಹೊಸದಾಗಿ ಬಂದು ವಾಸವಾಗಿದ್ದರಂತೆ. ಈ ಸಂಘದವರಿಗೆ ವಿಷಯ ಗೊತ್ತಾಗಿ ಅವರನ್ನು ಕರೆದು ಸನ್ಮಾನಿಸಬೇಕೆನ್ನುವ ನಿರ್ಧಾರ ಮಾಡುವಷ್ಟರಲ್ಲಿ ದುರ್ದೈವಶಾತ್ ಆಕೆ ತೀರಿಕೊಂಡರಂತೆ. ತಮ್ಮ ಸದುದ್ದೇಶ ಈಡೇರಲಿಲ್ಲವೆಂಬ ಕೊರಗು ಇವತ್ತಿಗೂ ಸಂಘದ ಕಾರ್ಯಕರ್ತೆಯರನ್ನು ಕಾಡುತ್ತಿರುವುದರಿಂದ ನನ್ನಂತವಳೊಬ್ಬಳು ಈ ಊರಲ್ಲಿ ನೆಲೆಯೂರಿದ ಸುದ್ದಿ ಗೊತ್ತಾಗುತ್ತಿದ್ದಂತೆ ತಡ ಮಾಡದೆ ಕಾರ್ಯಕ್ರಮ ನಡೆಸಿ, ಕೃತಾರ್ಥಭಾವನೆ ಅನುಭವಿಸಿ..

ಸನ್ಮಾನ ಮಾಡಿಸಿಕೊಂಡು ವೇದಿಕೆಯ ಮೇಲೆ ಕೂತಿದ್ದ ನಾನು ಯಾಕೆ ಉಗುಳು ನುಂಗಿಕೊಂಡೆ ಎನ್ನುವ ಸತ್ಯ ತಮಗೆ ಅರಿವಾಗಿರಬಹುದು. ಆಗದಿದ್ದರೂ ಪರವಾಗಿಲ್ಲ. ಸನ್ಮಾನಿಸಲು ಇರುವ ನಾನಾ ಕಾರಣಗಳಲ್ಲಿ ಇಂತಾದ್ದೂ ಇರುತ್ತದೆ ಎಂದು ಗೊತ್ತಾದಾಗ ಯಾರಾದರೂ ಬೆರಗಾಗದಿರಲು ಸಾಧ್ಯವೇ? ■



**೩೬೫ ಪುಟಗಳ ದಪ್ಪ**
**ಪುಸ್ತಕದ ಮೊದಲ ಹಾಳೆ**
**ಹೊಸ ವರ್ಷ.**
**ಅಲ್ಲಿ ಮೊದಲಿಗೆ ಪ್ರೀತಿ, ವಿಶ್ವಾಸ, ಸಹನೆ,**
**ಅನುಕಂಪ, ಮುಂತಾದ ಒಳ್ಳೆ ಪದಗಳ**
**ಮಾಲೆ ಕಟ್ಟುವ ಮೂಲಕ**
**ಬದುಕು ( ಬರವಣಿಗೆ ) ಪ್ರಾರಂಭಿಸೋಣ**

# ಹೊಸ ವರ್ಷದ ಚಿಂತನೆಗಳು

● **ಸುಕೇಶವ**

ವರ್ಷದ ಆರಂಭದಲ್ಲಿ ಹಲವರ ಚಿಂತನೆ ಹಲವು ಬಗೆ. ಕಳೆದ ವರ್ಷ ಆಗದೇ ಹೋದದ್ದು ಈ ವರ್ಷವಾದರೂ ಆಗಲಿ ಎನ್ನುವ ಬಯಕೆ. ಎಂಥೆಂಥವರಿಗೆ ಎಂಥೆಂಥ ಬಯಕೆ ಬರಬಹುದು ಎನ್ನುವ ಕೆಲವು ಆಲೋಚನೆಗಳು ಹೀಗಿವೆ.

| | |
|---|---|
| ಬಾಲಕರು | ಈ ವರ್ಷವಾದರೂ ನಮಗೆ ಹೆಚ್ಚಿನ ಪಾಕೆಟ್ ಮನಿ ಸಿಗಲಿ, ಹೋ ವರ್ಕ್ ಕಡಿಮೆ ದೊರೆಯಲಿ, ರಜಗಳು ಹೆಚ್ಚು ಹೆಚ್ಚು ಲಭಿಸಲಿ |
| ತುಸು ದೊಡ್ಡ ಬಾಲಕರು | ಎರಡನೇ ಪಿಯುಸಿ ಲಲಿತ ಈ ವರ್ಷವಾದರೂ ನನ್ನ ಕಡೆ ನೋಡಲಿ, ನಗಲಿ ನನಗೆ ಸಿಗಲಿ |
| ಯುವಕರು | ನಾನು ಅಂದುಕೊಂಡಿರುವ ಸಾಫ್ಟ್ ವೇರ್ ಕೆಲಸ ಈ ವರ್ಷ ಸಿಕ್ಕು ನಾನು ಅಮೆರಿಕಾಗೆ ಹೋಗುವಂತಾಗಲಿ |
| ಗೃಹಿಣಿ | ನನ್ನ ಮಗ ಈ ವರ್ಷ ಮದುವೆ ಒಪ್ಪಿ ನಮ್ಮ ಮನೆಗೆ ಸೊಸೆ ಬರುವಂತಾಗಲಿ |
| ಪತಿ | ಈ ವರ್ಷವಾದರೂ ನನ್ನ ಹೆಂಡ್ತಿ ನನ್ನ ಮಾತು ಕೇಳುವಂತಾಗಲಿ |
| ಪತ್ನಿ | ನನ್ನ ಯಜಮಾನರಿಗೆ ತಿಳಿಯದೇ ನಾನು ತವರು ಮನೆಗೆ ಮಾಡುತ್ತಿರುವ ಸಹಾಯ ಅವರಿಗೆ ಈ ವರ್ಷವೂ ತಿಳಿಯದೇ ಹೋಗಲಿ |
| ರಾಜಕಾರಿಣಿ | ಈ ವರ್ಷದ ಚುನಾವಣೆಯಲ್ಲಿ ನಾನು ಗೆಲ್ಲಲಾಗದಿದ್ರೂ ನನ್ನ ವೈರಿ ಸೋತು ಸುಣ್ಣವಾಗಲಿ |
| ಬಾಡಿಗೆದಾರ | ಈ ವರ್ಷವಾದರೂ ಮನೆ ಮಾಲೀಕ ಮನೆ ರಿಪೇರಿ ಮಾಡಿಸಿ ಕೊಡಲಿ |
| ಮನೆ ಮಾಲೀಕ | ಇರುವ ಬಾಡಿಗೆದಾರ ತೊಲಗಿ ಹೊಸ ಬಾಡಿಗೆದಾರ ಹೊಸ ಬಾಡಿಗೆ ಸಿಗುವಂತಾಗಲಿ |
| ಆಸ್ಪತ್ರೆ ಮಾಲೀಕ | ಈ ವರ್ಷ ಹೆಚ್ಚು ಹೆಚ್ಚಿ ಹೃದ್ರೋಗಿಗಳು ಬಂದು ಚಿಕಿತ್ಸೆ ಮಾಡಿಸಿಕೊಂಡು ಗುಣವಾಗಲಿ |
| ಲೈಬೊರೇಟರಿ | ನಮ್ಮ ಆಸ್ಪತ್ರೆಯ ಎಲ್ಲಾ ಐ.ಸಿ.ಯು. ಕೋಣೆಗಳು 365 ದಿನಗಳೂ ಭರ್ತಿಯಾಗಿರಲಿ |
| ಲೇಖಕ | ಈ ವರ್ಷ ನನ್ನ ಕಥೆ ಕಾದಂಬರಿಗಳು ಎಲ್ಲಾ ಪತ್ರಿಕೆಗಳಲ್ಲೂ ಪ್ರಕಟವಾಗಲಿ |

| | |
|---|---|
| ಪ್ರಕಾಶಕ | ಈ ವರ್ಷ ಲೈಬ್ರರಿಯ ಹಳೇ ಬಾಕಿ ಎಲ್ಲಾ ಚುಕ್ತಾ ಆಗಿ ಪುಸ್ತಕಗಳ ಖರೀದಿಗೆ ಆರ್ಡರ್ ಬರಲಿ |
| ನಟಿ | ಈ ವರ್ಷ ಕಡಿಮೆ ಬಟ್ಟೆ ಹಾಕುವಂಥ ಚಲನಚಿತ್ರಗಳು ಹೆಚ್ಚಿಗೆ ದೊರೆಯಲಿ, ಅದರಿಂದ ನನ್ನ ಸಂಭಾವನೆಯೂ ಗಗನ ಮುಟ್ಟಲಿ |
| ಭಿಕ್ಷುಕ | ನನಗೆ ಭಿಕ್ಷೆ ಕೊಡುತ್ತಿರುವ ಮನೆಯವರಿಗೆ ದೇವರು ಹೆಚ್ಚಿನ ಭಿಕ್ಷೆ ಕೊಡುವಂತೆ ಪ್ರೇರೇಪಿಸಲಿ |
| ಪೋಲೀಸ್ | ಈ ವರ್ಷವಾದರೂ ನನ್ನ ವರ್ಗ ಹೆಚ್ಚಿನ ಲಂಚವಿಲ್ಲದೇ ಆಗಲಿ |
| ಶಾಸಕ | ಈ ವರ್ಷ ನನ್ನ ಖಜಾನೆ ತುಂಬಿ ಮರುವರ್ಷ ಚುನಾವಣೆಗೆ ಸಹಾಯವಾಗಲಿ |
| ಕಂಟ್ರಾಕ್ಟರ್ | ಕಳೆದ ವರ್ಷ ಹಾಕಿದ ಟಾರು ಬೇಗ ಕಿತ್ತು ಹೋಗಿ ಈ ವರ್ಷ ನನಗೇ ಮರು ಕಾಂಟ್ರಾಕ್ಟ್ ಸಿಗಲಿ |
| ಹಿರಿಯ ನಾಗರೀಕರು | ನಮಗೆ ಹೆಚ್ಚಿನ ಸೌಲಭ್ಯ ಸಿಗಲಿ, ಸಣ್ಣ ಉಳಿತಾಯದ ಬಡ್ಡಿದರ ಕಡಿಮೆ ಆಗದಿರಲಿ, ಆದಾಯ ತೆರಿಗೆ ಮಿತಿ ಹೆಚ್ಚಲಿ, ಸಾಧ್ಯವಾದರೆ ಹಿರಿಯ ನಾಗರೀಕರಿಗೆ ಆದಾಯ ತೆರಿಗೆಯಿಂದ ಮುಕ್ತಿ ಸಿಗಲಿ |
| ರೈತ | ಮಳೆ ಬೆಳೆ ಚನ್ನಾಗಿ ಆಗಲಿ, ನಾವು ಬೆಳೆದಿದ್ದಕ್ಕೆ ಸರಿಯಾದ ಬೆಲೆ ಸಿಗಲಿ |
| ಪಂಡಿತರು | ಪಟ್ಟಿ ದೊಡ್ಡದಾಗುತ್ತದೆ, ಅದಕ್ಕೇ ಸರ್ವೇ ಜನಾ: ಸುಖಿನೋ ಭವನ್ತು ಎನ್ನುತ್ತೇನೆ |
| ಪಂಡಿತರ ಹೆಂಡತಿ | ನಮ್ಮ ಮನೆಯವರಿಗೆ ಹೆಚ್ಚು ಹೆಚ್ಚು ಹೋಮ, ಹವನ, ಗೃಹಪ್ರವೇಶ ಕಾರ್ಯಕ್ರಮಗಳು ದೊರೆತು ನಮ್ಮ ಮನೆ ಧವಸ, ಧಾನ್ಯ, ಆಭರಣಗಳಿಂದ ತುಂಬಲಿ |
| ಜ್ಯೋತಿಷಿ | ಈ ವರ್ಷ ನನ್ನಲ್ಲಿಗೆ ಹೆಚ್ಚು ಹೆಚ್ಚು ಜನ ಬಂದು ಜೊತಿಷ್ಯ ಕೇಳಿ ಮುಂಡಾಮೋಚ್ಕೊಳ್ಳಿ |
| ಪ್ರೇಕ್ಷಕ | ಈ ವರ್ಷ ವಿಭಿನ್ನ ರೀತಿಯ ಹಾಸ್ಯೋತ್ಸವಗಳು ನಡೆಯಲಿ, ಹಾಸ್ಯ ಭಾಷಣಕಾರರು ಹೊಸ ಹೊಸ ಜೋಕುಗಳನ್ನು ಹೇಳಲಿ |

● **ದಂಡಳ**

- ಎಲೈ ಅದೃಷ್ಟವೇ, ನಾವು 2020ರಲ್ಲಿ ಸ್ನೇಹಿರಾಗಿರೋಣವೆ?
- ನಮಗೆಲ್ಲರಿಗೂ ಅದೇ 365 ದಿನಗಳು ಸಿಗುತ್ತವೆ. ವ್ಯತ್ಯಾಸ ಅದನ್ನು ಬಳಸಿಕೊಳ್ಳುವುದರಲ್ಲಿದೆ.
- ಹೊಸ ವರ್ಷದ ದಿನ ಎಂದರೆ ಅದು ಎಲ್ಲರ ಹುಟ್ಟಿದ ಹಬ್ಬದ ದಿನದಷ್ಟೇ ಸಂಭ್ರಮ.
- ಆನ್ ನ್ಯೂ ಈಯರ್ಸ್ ಈವ್ ದಿ ಹೋಲ್ ವರ್ಲ್ಡ್ ಸೆಲೆಬ್ರೇಟ್ ದಿ ಫ್ಯಾಕ್ಟ್ ದಟ್ ಎ ಡೇಟ್ ಚೇಂಜಸ್. ಲೆಟ್ ಅಸ್ ಸೆಲೆಬ್ರೇಟ್ ದಿ ಡೇಟ್ಸ್ ಆನ್ ವಿಚ್ ವಿ ಚೇಂಜ್ ದಿ ವರ್ಲ್ಡ್.
- ನನ್ನ ಹೊಸ ವರ್ಷದ ನಿರ್ಣಯ ಏನು ಗೊತ್ತೆ? ನಾನು ಯಾರೆಂದು ಕಂಡುಕೊಳ್ಳುವುದು.
- ತಮ್ಮ ಹಳೆಯ ಹವ್ಯಾಸಗಳನ್ನ ಹೊಸದಾಗಿ ಪ್ರಾರಂಭಿಸಲು ಅನೇಕರು ಹೊಸ ವರ್ಷವನ್ನು ಎದುರು ನೋಡುತ್ತಾರೆ.
- ಗುಡ್ ರೆಸಲ್ಯೂಷನ್ಸ್ ಆರ್ ಸಿಂಪ್ಲಿ ಚೆಕ್ಸ್ ದಟ್ ಮೆನ್ ಡ್ರಾ ಆನ್ ಎ ಬ್ಯಾಂಕ್ ವೇರ್ ದೆ ಹ್ಯಾವ್ ನೊ ಅಕೌಂಟ್.
- ಹೊಸ ವರ್ಷ ಎಂದರೆ ಸರಿಯಾಗಿ ನಡೆದುಕೊಳ್ಳಲು ಇನ್ನೊಂದು ಅವಕಾಶ.
- ನಾನು ಈಗಾಗಲೇ ಪರ್‌ಫೆಕ್ಟ್. ಮತ್ತೇಕೆ ಬೇಕು ಹೊಸ ವರ್ಷದ ನಿರ್ಣಯ?
- ದಿಸ್ ಈಯರ್ ಮೈ ವಿಶ್ ಈಸ್ ದಟ್ ಎವೆರಿ ಒನ್ ಗೆಟ್ಸ್ ಎಕ್ಸಾಕ್ಲಿ ವಾಟ್ ದೆ ಡಿಸರ್ವ್.
- ಆಶಾವಾದಿ ಮಧ್ಯರಾತ್ರಿಯವರಿಗೂ ಎದ್ದಿರುತ್ತಾನೆ ಹೊಸ ವರ್ಷವನ್ನ ಸ್ವಾಗತಿಸಲು; ನಿರಾಶಾವಾದಿ ಹಳೆಯ ವರ್ಷ ತೊಲಗಲಿ ಎಂದು ಕಾದಿರುತ್ತಾನೆ.
- ಮೆ ಆಲ್ ಯುವರ್ ಟ್ರಬಲ್ಸ್ ಲಾಸ್ಟ್ ಅಸ್ ಲಾಂಗ್ ಅಸ್ ಯುವರ್ ನ್ಯೂ ಈಯರ್ ರೆಸಲ್ಯೂಷನ್ಸ್.
- ಒಂದು ವರ್ಷ ಕಳೆದೇ ಹೋಯಿತೆ? ಆದರೆ ನಾನೇನೂ ಬದಲಾಗೇ ಇಲ್ಲ.
- ಕೆಲವು ವರ್ಷಗಳ ಹಿಂದೆ ಹೊಸ ವರ್ಷದ ನಿರ್ಣಯಗಳ ಬಗ್ಗೆ ತಲೆ ಕೆಡಿಸಿಕೊಳ್ಳಬಾರದೆಂದು ನಿರ್ಧರಿಸಿದ್ದೆ. ಅದನ್ನು ಯಥಾವತ್ತಾಗಿ ಪಾಲಿಸಿಕೊಂಡು ಬರುತ್ತಿದ್ದೇನೆ.

# ಏನು ಮಾಡುವುದು?

● ಸಹನಾ ಪ್ರಸಾದ್

ಹೊಸ ವರುಷ. ಏನು ಮಾಡುವುದು ಎಂಬ ಯೋಚನೆ. ವರುಷ ಹೊಸತು, ನಾನಲ್ಲವಲ್ಲ. ಅದೇ ಮೈಮನ, ಮನೆ,ಕೆಲಸ, ಜನ. ಒಮ್ಮೆ ಒಬ್ಬರು ಮಾಜಿ ಸಹೋದ್ಯೋಗಿ ಸಿಕ್ಕಿದ್ದರು. ಹೇಗಿದೀರಿ ಎಂದು ಮಾಮೂಲು ಪ್ರಶ್ನೆ ಬಂತು. ಅಯ್ಯೋ, ಅದೇ ಗಂಡ, ಅದೇ ಮಕ್ಕಳು, ಅದೇ ಕೆಲಸ ನನ್ನ ಮಾಮೂಲಿ ಧಾಟಿಯಲ್ಲಿ ಉತ್ತರಿಸಿದೆ. ಅವರು ಘಾಬರಿಯಿಂದ ಕೇಳಿದರು ಏನು ಮೇಡಂ, ಅದೆಲ್ಲ ಬದಲಾಯಿಸುವುದಕ್ಕೆ ನೋಡ್ತಾ ಇದೀರ. ಹಾಸ್ಯಪ್ರಜ್ಞೆ ಇಲ್ಲದವರ ಜತೆ ತಮಾಷೆ ಮಾಡಿದರೆ ಹೀಗೆ ಆಗುವುದು!

ಇರಲಿ, ಈಗ ಹೊಸವರುಷದಲ್ಲಿ ಏನು? ಸಿನೆಮಾಗಳಲ್ಲಿ ತೋರಿಸುವಂತೆ ನಮ್ಮ ಮನೆಯಲ್ಲಿ ಪಾರ್ಟಿ, ಕುಡಿತ, ಕುಣಿತ ರೂಢಿ ಇಲ್ಲ. ಮಾರನೆಯದಿನ ಕೆಲಸಕ್ಕೆ ಹೋಗಬೇಕಾದರಂತೂ ಬೇಗ ಮಲಗುವ ಯೋಚನೆ. ಜತೆಗೆ ಸಿಕ್ಕವರಿಗೆಲ್ಲ ಶುಭಾಶಯ ಕೋರಬೇಕು. ಅವರು ನಿಮಗೂ ಸಹ' ಎಂದಾಗ ಹಲ್ಲು ಕಿರಿಯಬೇಕು. ಹೊಸ ವರುಷದ ಮೊದಲ ದಿನ ಎಲ್ಲರೂ ಉದ್ವೇಗಗೊಂಡಿರುತ್ತಾರೆ. ಎಲ್ಲರ ಮನಸ್ಸಲ್ಲೂ ಏನೋ ರೀತಿ ಉತ್ಸಾಹ, ಖುಷಿ. ಜತೆಗೆ ಆತಂಕ. ಆತಂಕ ಕಂಡು ಬರುವುದು ಹೊಸವರುಷಕ್ಕೆ ಬಹಳಷ್ಟು ಪ್ಲಾನ್ಮಾಡಿರುವವರಲ್ಲಿ. ಹೀಗೆ ಮಾಡುವೆ, ಹಾಗೆ ಇರುವೆ ಅಂತ ನಿರ್ಧಾರ ಮಾಡಿರುವರು ಹಾಗೆಯೇ ನಡೆದುಕೊಳ್ಳಬೇಕೆನ್ನುವ ತಳಮಳದಲ್ಲಿರುತ್ತಾರೆ. ಸ್ವಲ್ಪ ವಯಸ್ಸಾದವರು, ಜ್ಞಾನಿಗಳು ಅಯ್ಯೋ, ಹೊಸ ತಿಂಗಳು, ಹೊಸ ಕ್ಯಾಲೆಂಡರ್ಪುಟ, ಹೊಸ ಶುಭಾಶಯಗಳು, ಅಷ್ಟೇ ತಾನೇ ಎಂಬ ಉದಾಸೀನದಲ್ಲಿ ಹಾಯಾಗಿರುತ್ತಾರೆ.

ಏನಪ್ಪಾ, ಏನು ನಿನ್ನ ಹೊಸ ವರುಷದ ಸಂಕಲ್ಪ? ಎಂದು ನನ್ನ ಕಿರಿಯ ಸಹೋದ್ಯೋಗಿಯನ್ನು ಕೇಳಿದೆ. ಏನಿಲ್ಲ ಮಾಮ್, ತೋಚುತ್ತಿಲ್ಲ ಏನು ನಿರ್ಧಾರ ಮಾಡಬೇಕೆಂದು. ಮನೆಯಲ್ಲಿ ಹೆಂಡತಿಯ ರಾಜ್ಯಭಾರ. ಆಫೀಸಲ್ಲಿ ಬಾಸ್ಮಾತೇ ನಡೆಯುವುದು. ಇನ್ನು ಏನಾದ್ರು ನಿರ್ಧಾರಮಾಡಕ್ಕೆ ನನಗೆಲ್ಲಿ ಸ್ವತಂತ್ರ ಇದೆ! ಅವನ ಪ್ರಾಮಾಣಿಕತೆ ತಂದಿರುವ ಶಾಂತಿಯನ್ನು ಮೆಚ್ಚಿದೆ.

ನಿನ್ನದೇನಮ್ಮ? ನಮ್ಮೂರಿನ ಪದ್ಮಾವತಿ ಅಲಿಯಾಸ್ಮನೆ ಕೆಲಸದಾಕೆಯನ್ನು ಭಯಭಕ್ತಿಯಿಂದ ಪ್ರಶ್ನಿಸಿದೆ. ಎಲ್ಲರ ಮನೆಯಲ್ಲೂ ಒಂದು ಲೋಟ ಟೀ ಮತ್ತು 20% ಜಾಸ್ತಿ ಪಗಾರ ಕೇಳುವುದು! ಕಿರಿಕಿರಿ ಮಾಡಿ, ಅಲ್ಲಿ ಗುಡಿಸು, ಇಲ್ಲಿ ಒರೆಸು, ಈ ಪಾತ್ರೆ ಸರಿಯಾಗಿ ತೊಳೆದಿಲ್ಲ, ಮನೆಮೂಲೆಯಲ್ಲಿ ಕಸ ಇದೆ ಹೀಗೆಲ್ಲ ಹೇಳುವವರ ಮನೆಗೆ ಮುಲಾಜಿಲ್ಲದೆ ಚಕ್ಕರ್ ಹಾಕುವುದು! ಬೆಚ್ಚಿದೂರ ಸರಿದೆ.

ನೀ ಹೇಳೇ! ಸ್ನೇಹಿತೆಯನ್ನು ಕೇಳಿದಾಗ ದುರುದುರು ನೋಡಿದಳು. ನಿನ್ನ ಅನ್-ಫ್ರೆಂಡ್ ಮಾಡೋದು, ಮುಖಪುಟದಿಂದ! ನಾ ಹೌಹಾರಿದೆ. ಯಾಕೆ, ನಾ ಏನು ಮಾಡಿದೆ? ಇನ್ನಷ್ಟು ಕನಲಿದಳು ಆ ನನ್ನ ದುಷ್ಮನ್, ವೀಣಾ ಪೋಸ್ಟ್ಗೆ ಏನೇ ನಿನ್ನ ಲೈಕು, ಕಾಮೆಂಟ್? ನಮ್ಮೆಜಮಾನರು ಅವಳಿಗೆ ಬ್ಯೂಟಿಫುಲ್ ಅಂತೆಲ್ಲ ಹಾಕಿದ್ದರು. ಮುಲಾಜಿಲ್ಲದೆ ಅವರನ್ನು ಫ್ರೆಂಡ್ ಲಿಸ್ಟ್‌ನಿಂದ ತೆಗೆದುಹಾಕಿದೆ!

ಅವಳನ್ನೂ ತೆಗೆದೆಯ? ಎನ್ನಲು ಅವಳು ಹೇಳಿದ್ದು ಅಯ್ಯೋ, ಅವಳಿಲ್ಲದೆ ಏನು ಮಜಾ ಇದೆ? ಅವಳ ಫೋಟೋ, ನಿಲುಮೆ ನೋಡೋದು, ಉರಿಕೊಳ್ಳೋದು, ಮತ್ತೆ ನೋಡೋದು ಇದು ಮಿಸ್ಮಾಡೋಕ್ಕೆ ಆಗುತ್ತಾ!.

ನೀವು ಹೇಳ್ರೀ ಇವರಿಗೆ ದುಂಬಾಲು ಬಿದ್ದೆ. 2 ದಿನ ತಲೆತಿಂದಮೇಲೆ ಒಂದೇ ವಾಕ್ಯ ದಯಪಾಲಿಸಿದರು – ಆದಷ್ಟು ನಿನ್ನಿಂದ ದೂರ ಇರುವುದು!

# 2020ಗೆ ಸ್ವಾಗತ

(ಧಾಟಿ: ಕಾಡು ಕುದುರೆ ಓಡಿ ಬಂದಿತ್ತಾ)

● ಎನ್. ರಾಮನಾಥ್

**ಜೋಡಿ ಸಂಖ್ಯೆ ಕೂಡಿ ಬಂದಿತ್ತಾ**
**ಟ್ವೆಂಟಿ ಟ್ವೆಂಟಿ ಕೂಡಿ ಬಂದಿತ್ತಾ**

**ಊರಮಧ್ಯೆ ಸೂರನೇರಿ ಢಣ್ ಢಣ್ ಅನ್ನೋ ಕ್ಲಾಕಿನಲ್ಲಿ**
**ಹರೆಯದ ಐಕ್ಳು ನಿಮ್ಷ್ ನಿಮ್ಷಕ್ಕೂ ಕತ್ತೆತ್ನೋಡೋ ಹೊತ್ತಿನಲ್ಲಿ**
**ಮುಗಿವೇ ಇಲ್ಲದ ಸಮಯದಿಂದ ಹಳೆ ವರ್ಷಗಳ ನುಂಗಿನಿಂತು**
**ಹ್ಯಾಪಿ ನ್ಯೂಇಯರ್ ಬಂದೇ ಬಿಟ್ಟಿತ್ತಾ ॥ಪ॥**

**ಕೈಯಾ ಗ್ಲಾಸು ಕಿಣಿಕಿಣಿಸಿತ್ತ ಬಾಯಿ ಚೀಯರ್ಸ್ ಕೂಗುತ್ತಿತ್ತ**
**ಕ್ಯಾಸ್ಟು ಕ್ರೀಡು ಜೆಂಡರ್ ಮರೆತು ಹ್ಯಾಪೀ ನ್ಯೂ ಇಯರ್ ಎನ್ನುತ್ತಿತ್ತ**
**ಹಿಮದ ಗಾಳಿ ರೊಯ್ಯಂದಿತ್ತ ಹೊಸ ವರ್ಷಾನ ಸ್ವಾಗತಿಸಿತ್ತ**
**ಜನವರಿ ಒಂದು ನಗುತಲಿ ನಿಂತಿತ್ತ ।ಪ।**

**ಕಣ್ಣಿನಾಗ ಸಣ್ಣ ಕನ್ಸು ಹೊಳೆಹೊಳೆಯುತ್ತ ಕಾಣುತ್ತಿತ್ತ**
**ಮುಂದಿನ ಡಝನ್ ತಿಂಗಳಿಗೆಂದು ನೂತನ ಭಾಷ್ಯ ಬರೆಯುತ್ತಿತ್ತ**
**ಮುಗಿದ ಕಾಂಡ ಹಿಂದೆ ಹಾಕಿ ಮುಂದಿನ ದಿನದ ಭರವಸೆ ಹೊತ್ತ**
**ಹೊಸ ಕ್ಯಾಲೆಂಡರ್ ಗೋಡೆಯನೇರಿತ್ತ ।ಪ।**

**ವಿದ್ಯೆ ಜೊತೆಗೆ ದುಡಿಮೆ ಸೇರಿ ದುಡಿವ ಕೈಗೆ ಸಿರಿಯೂ ಸೇರಿ**
**ಮೆರೆಯೋದನ್ನ ಮರ್ಸೋವಂಥ ಸರಳತೆಯನ್ನು ಹುಟ್ಟಿಹಾಕಿ**
**ಜೀವಿಗಳನು ಹೊತ್ತುಕೊಂಡು ಕಷ್ಟ-ಸುಖವ ದಾಟಿಸಿಕೊಂಡು**
**ಟ್ವೆಂಟಿ ಟ್ವೆಂಟಿ ಮುಂದಕೆ ನಡೆದಿತ್ತ ।ಪ।**

# ಗೊರಕಾಸುರ ಪ್ರಸಂಗವು..

**● ಜಯಶ್ರೀ ದೇಶಪಾಂಡೆ**

ಒಮ್ಮೆ ಹೀಗಾಯ್ತು,  ರೈಲಿನ ಎರಡನೇ ಕ್ಲಾಸಿನ ಹವಾ ನಿಯಂತ್ರಿತ ಡಬ್ಬಿಯಲ್ಲಿ ನಾನು ಪ್ರಯಾಣಿಸುತ್ತಿದ್ದೆ. ಟೈಮು ರಾತ್ರಿಯ ಹನ್ನೊಂದು ಆಯಿತು ಅಂತ ಮೊಬೈಲ್ ಹೇಳಿತ್ತು. ಹನ್ನೊಂದಾಗಿ ಹೋದರೂ.ಎದುರಿನ ಸೀಟು ಯಾನೆ ಬರ್ಥು ಖಾಲಿಯಾಗಿದ್ದುದನ್ನು ಕಂಡು ಹಿರಿಹಿಗ್ಗಿ ಮಲಗುವ ಸಮಯವಾಯಿತಲ್ಲ ಇನ್ನೇನು ಬಿಡು ಅಂದುಕೊಳ್ಳುತ್ತ ರಗ್ಗು ಹೊದ್ದು ಬೆಳಗಿನ ವರೆಗೆ ನಿಶ್ಚಿಂತೆಯ ನಿದ್ದೆಗಾಗಿ ದಿಂಬಿಗೆ ತಲೆಯಿಟ್ಟು ಮಗ್ಗುಲಾದೆ. ಇಡೀ ಕಂಪಾರ್ಟಮೆಂಟು ನೂರಾರು ಮೈಲಿಗಳ ಓಟ ಮುಗಿಸಿ ಬಂದವರಷ್ಟು ದಣಿದು ಸ್ಥಬ್ದವಾಗಿ ಮೇಲೆ ಪಕಪಕವೆನ್ನುತ್ತಿದ್ದ ನೀಲಿ ಜೀರೋ ಬಲ್ಬಿನಡಿ ನಿದ್ರೆಯಲ್ಲಿ ಮುಳುಗಿತ್ತು. ನನಗೂ ಮಂಪರು ಕವಿದಂತೆನಿಸುತ್ತಿರುವಾಗ ರೈಲು ನಿಂತುಕೊಂಡಿತು.

ಮುಂದೆ ಐದು ನಿಮಿಷ ಅಷ್ಟೇ, ನನ್ನ ಎದುರಿನ ಬರ್ಥಿನ ಮೇಲೆ ಸುಮಾರು ನೂರಿಪ್ಪತ್ತು ಕೆಜಿಯ ಒಂದು ಶರೀರ ಬಂದು ಬೆಡ್ ಶೀಟು ಹಾಸಿ ರಗ್ ಹೊದ್ದು ಉರುಳಿಕೊಂಡಿತು. ಬರಲಿ, ಅವನೂ ಟಿಕೆಟ್ ಕೊಂಡು ಬಂದವನಲ್ವೇ ಎಂದು ನಿರ್ಲಕ್ಷಿಸಿದೆ.

ಹತ್ತು ನಿಮಿಷದಲ್ಲಿ ಅಲ್ಲೊಂದು ಬೋರ ವೆಲ್ ಕೊರೆಯಲು ಶುರು ಆದ ಹಾಗೆ ಭಾಸವಾಯಿತು. ದಡಮ್ಮನೆ ಎದ್ದು ಕೂತೆ. ಛೇ ರೈಲಿನಲ್ಲಿ ಯಾರಾದರೂ ಬೋರ್ ವೆಲ್ ಕೊರೆಯುವುದು ಸಾಧ್ಯವೇ? ಅದೂ ವೇಗವಾಗಿ ಓಡುವ ರೈಲು. ಸರಿ, ಮುಂದೆ ಒಂದೇ ನಿಮಿಷದಲ್ಲಿ ಗೊತ್ತಾದ ಸಂಗತಿಯೆಂದರೆ ಆ ಬೋರ್ ವೆಲ್ ಕೊರೆತ ನನ್ನ ಎದುರಿನ ಬರ್ಥಿನಿಂದ ಹೊರಟಿತ್ತು. ಇದೇನು ಕತೆಯೋ ದೇವರೇ ಅಂತ ಕಂಗಾಲಾಗಿ ನೋಡಿದರೆ ಆಸಾಮಿಗೆ ಮೈ ಮೇಲೆ ಎಚ್ಚರವೇ ಇಲ್ಲದ ಕುಂಭಕರ್ಣ ನಿದ್ದೆ.  ಅದಷ್ಟೇ ಆಗಿದ್ದರೆ ನನ್ನದೇನೂ ತಕರಾರಿಲ್ಲ. ಅವನ ಮೂಗು ಗಂಟಲಿನ ಎರಡು ಹೊಳ್ಳೆಗಳ ಮೂರು ದ್ವಾರಗಳಿಂದಲೂ ಹೊಮ್ಮಿ ಚಿಮ್ಮಿ ಬರ್ತಿದ್ದ  ಭಯಂಕರ ಗೊರಕೆಯ ಸದ್ದು ನನ್ನ ರಾತ್ರಿಯ ಶಾಂತಿಯನ್ನು ಕದಡಿದ್ದು ಯಾವ ನ್ಯಾಯ? ಇನ್ನು ಅದರ ಆರೋಹಣ ಅವರೋಹಣಾತ್ಮಕ ಸ್ವರ ವೈವಿಧ್ಯಗಳೂ, ಮದ್ಯೇ ಮಧ್ಯೇ 'ಖ್ವೆ ಖ್ವೇ ಖ್ವೇ..'ಗಳೂ  ಪ್ಲಿಪ್ಲಿಪ್ಲಿಪ್ಲಿ ಎಂಬ ಬಾಯಿ ಪತರಗುಟ್ಟುವಿಕೆಯೂ ಸೇರಿ ನಗಾರಿ ಬಾರಿಸಿದುವು!

ಅವನು ನಿದ್ದೆ ಮಾಡಲಿ, ಅದವನ ಹಕ್ಕು.. ಬರ್ಥಿಗೆ ದುಡ್ಡು ಕೊಟ್ಟೇ ಬಂದಿದ್ದ. ಆದರೆ ಅವನಷ್ಟೇ ದುಡ್ಡು ಸುರಿದು ಬರ್ಥು ಹಿಡಿದ ನನ್ನ ನಿದ್ದೆಯನ್ನು ಕೊಂದುಹಾಕುವ ಹಕ್ಕು ಅವನಿಗಿಲ್ಲ, ಯಾರಿಗೂ ಇಲ್ಲ.

ಆಸಾಮಿಯ ಗುಡಾಣದ ಹೊಟ್ಟೆಯೂ, ಕಟ್ಟಿಗೆಯ ಕೊರಡಿನಂಥ ಭುಜಗಳೂ ಆ ಗೊರಕೆಯ ಸ್ಪೀಡು, ಮತ್ತು ಸೌಂಡಿನ ಪ್ರಖರತೆಗೆ ಎಗರೆಗರಿ ಬೀಳುತ್ತ ಅವನು ಹೊದೆದ ರಗ್ಗನ್ನೇ ತಕತಕ ಕುಣಿಸಿ ಇಡೀ ವಾತಾವರಣವೇ ಗೊಂದಲ ಅಂದ್ರೆ ಗೊಂದಲ!

'ಇದೇನು? ಇನ್ನೇನು; ಎನ್ನುವ ಪ್ರಶ್ನೆಗಳನ್ನು ತಳ್ಳಿ ಹಾಕುತ್ತ ಮಗ್ಗುಲಾಗಿ ಗೋಡೆಗೆ ಮುಖ ತಿರುಗಿಸಿ ಹೊರಳಿಕೊಂಡೆ... ಪಾಪಿ ಸಮುದ್ರಕ್ಕೆ ಹೊಕ್ಕರೆ ಮೊಳಕಾಲುದ್ದ ನೀರಾದರೂ ಸಿಕ್ಕೀತು ನನಗೆ ಪಾದದಷ್ಟೂ ಇಲ್ಲ!

ಅವನ ಗೊರಕೆ ಕಂಪಾರ್ಟಮೆಂಟಿನ ಗೋಡೆಗಳಿಗೆ ಹೊಡೆದುಕೊಳ್ಳುತ್ತ ಥೇಟ್ ವಿಜಾಪುರದ ಗೋಳಗುಮ್ಮಟದಂತೆ ಪ್ರತಿಧ್ವನಿಸಿ ಮಾರ್ಮೊಳಗಿತು! ದಡಮ್ಮನೆ ಎದ್ದು ಕೂತೆ... ಬುದ್ಧನಂತೆ ಆ ಕ್ಷಣವೇ ಅಲ್ಲಿಂದ ಹೊರಬೀಳು ಎಂದಿತು ಮನಸ್ಸು. ಸಾಧ್ಯವೇ? ನೂರೋ ನೂರಿಪ್ಪತ್ತೋ ಮೈಲಿ ವೇಗದಲ್ಲಿ ಓಡುತಿತ್ತು ರೈಲು.

ಟಿಸಿಯನ್ನು ಕರೆದು ದೂರು ಹೇಳುವುದು ಒಂದು ಉಪಾಯ. ಎದ್ದು ಅಷ್ಟು ದೂರ ಓಲಾಡುತ್ತ ನಡ್ಕೊಂಡು ಹೋಗಿ ಟಿಸಿಯನ್ನು ಅರಸಿದೆ... ಕೊನೆಯ ಕೂಪೆಯ ಅಂಚಿನ ಬರ್ಥಿನಲ್ಲಿ ಮಲಗಿದ್ದ ಟಿಸಿ ತಾನೂ ಪುಟ್ಟದೊಂದು ಬೋರ್ ವೆಲ್ ಕೊರೆಯುತ್ತಲಿದ್ದ! ಹಣೆಬರಹವೇ ಎಂದು ಅದನ್ನೇ ಗಟ್ಟಿಸಿಕೊಂಡು ಬಂದು ಕೂತೆ...

ಬೆಳ್ಳಂಬೆಳಗಿನ ವರೆಗೆ ಬೋರ್ ವೆಲ್ ನ ಎದುರು ಕಣ್ಣು ಕಣ್ಣು ಬಿಟ್ಟುಕೊಂಡು ನರಳಿ, ಹೊರಳಿ, ಕೆರಳಿ ಕೂತವಳನ್ನು ಆರೂವರೆಗೆ ಎದ್ದ ಆ ಜೋಳದ ಮೂಟೆ ದುಡುಮ್ಮನೆ ಸೀಟಿನಲ್ಲಿ ಎದ್ದು ಕೂತು ಕಣ್ಣುಜ್ಜಿಕೊಂಡು 'ನಮಸ್ಕಾರ್ರೀ ಮೇಡಮ್ ಬೆಂಗಳೂರು ಬಂತೇನ್ರಿ?' ಎಂದ.

ಬೆಂಗಳೂರು ಎಂದು ಬರೆದಿದ್ದ ಬೋರ್ಡೇನಾದರೂ ಸಿಕ್ಕಿದರೆ ಅದನ್ನೇ ತೊಗೊಂಡು ಬೀಸಿ ಬಡಿಯಬೇಕೆನ್ನುವಷ್ಟು ಉಮೇದು ಉಕ್ಕಿತು. ನಾನು ಮಾತಾಡಲಿಲ್ಲ. ಅಯ್ಯ ಗೊತ್ತಿಲ್ಲ ಅಂದ್ರ ಬಿಡ್ರೀ.. ಮೇಡಮ್ ಹಿಂಗ್ಯಾಕ ಮಾರೀ ಕೆಂಪ್ ಮಾಡ್ಕೊಂಡೀರಿ? ಅಂದನವ..

'ಮತ್ತ ಮಾರೀ ಕೆಂಪಲ್ಲದಿದ್ರ ಇನ್ನೇನಾಗಬೇಕು? ಬೆಳತನಕಾ ನಿದ್ದಿ ಇಲ್ದ ತಪಸ್ಸು ಮಾಡಲಿಕ್ಕೆ ಹಚ್ಚಿದಿಯಲ್ಲ' ಅನ್ನಬೇಕೆನಿಸಿತು, ಆದರೆ ಅಷ್ಟು ಆಗ್ರಹಕಾರೀ ಬುದ್ಧಿ ನನ್ನದಲ್ಲವಾಗಿ 'ಏನು ಭಯಂಕರ ಗೊರಿಕೆ ನಿಮ್ಮದೂ.. ರೇಲ್ವೆಯೊಳಗೆ ಬೋರ್ ವೆಲ್ ಕೊರದ್ರಿ' ಎಂದಷ್ಟೇ ಹೇಳಿದೆ. ರೈಲು ನಿಲ್ದಾಣದ ಪ್ಲಾಟ್ ಫಾರ್ಮಿಗೆ ಬರತೊಡಗಿತ್ತು.

'ಛೇ ಛೇ ಎಲ್ಲೀ ಗೊರಿಕಿ ರೀ? ಕನಸು ಕಂಡಿರಬೇಕು ಬಿಡ್ರಿ ನೀವು' ಅಂದ. 'ಎಲಾ ಇವನ? ಅನಿಸಲಾರದೇ ಇದ್ದೀತೇ? ನನ್ನ ಸತ್ಯ ಹೇಳಿಕೆಯನ್ನು ಹೀಗೆ ಔಟ್ ರೈಟ್ ನಿರಾಕರಿಸಿ ಇಡೀ ರಾತ್ರಿಯ ನನ್ನ ಘೋರ ಸಂಕಟವನ್ನು ತಳ್ಳಿ ಹಾಕಿದ ಅವನನ್ನು ಹಾಗೇ ಬಿಡಬಾರದೆನಿಸಿದರೂ ಸಾಕ್ಷಿ ಹೇಳಬೇಕಾದ ಅಕ್ಕಪಕ್ಕದ ಕಂಪಾರ್ಟ್‌ಮೆಂಟಿನ ಮನುಷ್ಯಗಣ ಊರು ಬಂತೆಂದು ದುಡುದುಡು ಓಟ ಕಿತ್ತಿದ್ದರು.

ಅಲ್ಲಿಗೆ ಆ ಗೊರಕಾಸುರ ಪ್ರಸಂಗವು ಹೀಗೆ ಅನಿರೀಕ್ಷಿತ ಅಂತ್ಯ ಕಂಡಿತು.

ಹಾಂ! ಗೊರಕಾಸುರನ ಹಾವಳಿ ಇದು, ನರಕಾಸುರ ಅಲ್ಲ... ಪ್ರಪಂಚದಾದ್ಯಂತ ಸುಮ್ಮನೆ ನಿದ್ದೆ ಮಾಡಿಬಿಡಬೇಕೆಂದು ಹಂಬಲಿಸುವ ಕೋಟ್ಯಾವಧಿ ಜನರನ್ನು ಕಣ್ರೆಪ್ಪೆ ಮುಚ್ಚಲೂ ಬಿಡದಂತೆ ಪೀಡಿಸುವ ಗೊರಕಾಸುರ ನಮ್ಮ ನಿಮ್ಮಂಥ ಜನತೆಯಾಗಿರುವ ಅನೇಕರ ಮೂಗು ಗಂಟಲುಗಳನ್ನೇ ತನ್ನ ಆವಾಸ ಸ್ಥಾನವಾಗಿಸಿಕೊಂಡು ವಿಜೃಂಭಿಸಿ, ತನ್ಮೂಲಕ ನಮ್ಮಂಥ ನಿಷ್ಪಾಪಿ ನಿದ್ರಾತುರ ಸುಜನರನ್ನು ಕಾಡುವ ಕಿರಿಕಿರಿಯಾಗಿದ್ದಾನೆ. ಈಗೆಲ್ಲ ಅದೆಂಥೆಂಥವೋ ಮಶೀನುಗಳೆಲ್ಲ ಬಂದಿವೆ, ಈ ಗೊರಕೆಯನ್ನು ಮಟ್ಟ ಹಾಕಿತೀವಿ ಎಂದು ಘಂಟಾಘೋಷಿಸಿಕೊಂಡು ಮಾರ್ಕೆಟ್ಟಿನಲ್ಲೂ, ಆನ್ಲೈನಿನಲ್ಲೂ ಕೂತಿವೆ. ಸಮಯ ಸಿಕ್ಕಿದ್ದರೆ ನನ್ನೆದುರಿನ ಗೊರಕಾಸುರನಿಗೆ ಈ ಬಗ್ಗೆ ಒಂದು ಕ್ಲಾಸ್ ತೊಗೊಳ್ಳಬಹುದಿತ್ತು ಅಂತ ಹಳಹಳಿಸುತ್ತ ರೈಲಿನಿಂದ ಇಳಿದೆ. ಕೊಟ್ಟ ಕೊನೆಯ ಸೀಟಿನ ಮೇಲ್ಭಾಗದಲ್ಲೊಬ್ಬಾತ ಊರು ಬಂದದ್ದೂ ಎಚ್ಚರವಿಲ್ಲದೆ ಇನ್ನೂ ಬೋರ್ ವೆಲ್ ಕೊರೆಯುತ್ತಲೇ ಸ್ವಪ್ನಲೋಕದ ಸ್ವರ್ಗಸುಖದಲ್ಲಿ ಮುಳುಗಿದ್ದ! ■

# ಅಜ್ಜಿಯ ಇತಿ ಮಿತಿ ಐಡಿಯಾ

● ಇ.ಆರ್. ರಾಮಚಂದ್ರನ್

'ಹೊಸ ವರ್ಷದಲ್ಲಿ ನಿನ್ನ ರೆಸಲ್ಯೂಷನ್ ಏನು ಅಜ್ಜಿ?'

'ರೆವಲ್ಯೂಷ್ ನಾನು ಯಾಕೆ ಮಾಡ್ಬೇಕೋ ಈಗ.. ರಷ್ಯ, ಚೈನಾದವರಲ್ವಾ ಅದನ್ನ ಆವಾಗಾವಾಗ ಮಾಡೋದು?'

'ಅಜ್ಜಿ! ನಾನು ಕೇಳ್ತಿರೋದು ರೆಸಲ್ಯೂಷನ್.. ಧ್ಯೇಯ, ಸಂಕಲ್ಪ. ಕ್ರಾಂತಿ ಅಲ್ಲ..'

'ಏನೋ ಸುಡಗಾಡು.'

'ಈ ವರ್ಷ ಏನೇನು ಮಾಡೋಣ ಅಂತ ಮನಸ್ಸಿನಲ್ಲಿ ಲೆಕ್ಕ ಹಾಕಿಕೊಂಡಿದ್ದೀಯ?'

'ನಾನು ಹಾಲು ಕುಡಿಯೋದು ಜಾಸ್ತಿ ಆಗಿದೆ. ಕಡಿಮೆ ಕುಡಿಯೋಣಾಂತ ಇದ್ದೀನಿ.. ಅದರಲ್ಲಿ ಕೊಬ್ಬಿದೆಯಂತಲ್ಲಾ?'

'ಹಾಲಿನಲ್ಲಿ ಕೊಬ್ಬಿನಾಂಶ ಇರುತ್ತೆ ಅಷ್ಟೆ. ಕೊಬ್ಬು ನಿನಗೆ ಬಂದಿದ್ಯಾಂತ?'

'ಮನೆಹಾಳ! ನನಗೆ ಯಾಕೆ ಬರುತ್ತೋ ಕೊಬ್ಬು?'

'ಮಾಡರ್ನ್ ಅಜ್ಜಿಯಾಗಿ ವಟ ಸಾವಿತ್ರಿ ವ್ರತದಿಂದ ಹಿಡಿದು ವಾಟ್ಸಪ್ಪೂ ಅರೆದು ಕುಡಿದಿದ್ದೀಯ. ನಿನಗೆ ಇನ್ನು ಹಾಲು ಯಾಕೆ? ಬೇರೆ ಏನು ನಿನ್ನ ರೆಸಲ್ಯೂಷನ್ ಅಜ್ಜಿ..'

'ಜೀವನದಲ್ಲಿ ಸ್ವಲ್ಪ ಇತಿ ಮಿತಿ ಮಾಡ್ಕೋಳೋಣಾಂತ ಯೋಚಿಸ್ತಿದೀನಿ. ಊಟ, ನಿದ್ದೇಲಿ ಸ್ವಲ್ಪ ಹಿಡಿತ ಬೇಕೂಂತ ಅನ್ಸುತ್ತೆ... ವಯಸ್ಸಾಗ್ತಾ ಇದೆಯಲ್ಲೋ..'.

'ಅಜ್ಜಿ! ಟೇಕ್ ಇಟ್ ಈಸಿ! ಈಗ್ಲೇ ನೀನು ಹಕ್ಕಿ ಕಾಳು ತಿಂದಂತೆ ಕೆದಕಿ ಕೆದಕಿ ಇಷ್ಟಿಷ್ಟೇ ತಿಂತೀಯ... ಬಾವುಲಿ ಹಾಗೆ ಮುಕ್ಕಾಲು ರಾತ್ರಿ ಎದ್ದಿರ್ತೀಯ. ನಿನಗೆ ಈಗ ಬೇಕಾಗಿರೋದು ಒಳ್ಳೇ ಊಟ, ನಿದ್ರೆ. ಉಪವಾಸ... ಜಾಗರಣೆ ಅಲ್ಲ'.

'ಅದು ನಿನ್ನ ರೆಸಲಷನ್.. . ಅರ್ಧ ದಿವಸ ಮಲಗ್ತಿಯಾ.. ಎದ್ದಾಗ ದಿನವಿಡೀ ಏನಾದ್ರೂ ತಿಂತ ಕೂತಿರ್ತೀಯ.. ಗೂಳಿ ಹಾಗೆ ಊದುಬಿಟ್ಟಿದೀಯಾ...'.

'ನಿನಗೆ ಯಾಕೆ ಇದ್ದಕ್ಕಿದ್ದಹಾಗೆ ಇತಿ ಮಿತಿ ಅನ್ನೋ ಐಡಿಯಾ ಬಂತು ಅಜ್ಜಿ? ನಿನ್ನೆ ತನಕ ಸರಿಯಾಗಿದ್ದೈಲ್ಲಾ?'

'ಇತಿ ಮಿತಿ ಬೇಕು ಕಣೋ ಜೀವನದಲ್ಲಿ. ಯೋಚಿಸ್ತಿದ್ದೆ. ಸೂರ್ಯ, ಚಂದ್ರ ಅವರುಗಳೇ ಇತಿ ಮಿತೀಲಿ ಇರ್ತಾರೆ.. ಸೂರ್ಯ ಸ್ವಲ್ಪ ಮುಂದಕ್ಕೆ ಬರಲಿ.. ನಾವೆಲ್ಲಾ ಬೆಂದ್ಹೋಗ್ತೀವಿ.. ಅಷ್ಟೆ ಅವ್ನು ಹಿಂದೆ ಹೋದ್ರೂನೂ ಮಂಜಿನ ಗಡ್ಡೆ ಆಗ್ಬಿಡ್ತೀವಿ.. ಗಾಳಿ ಲಿಮಿಟ್ಟೇ ಇಲ್ಲಾ ಅಂತ ಬೀಸಿದ್ರೆ ಎಲ್ಲಾರೂ ಬಾಲಾಂಗುಚ್ಚಿ ಇಲ್ಲದ ಗಾಳಿಪಟದ ಹಾಗೆ ಎಗರಿ ಗೋತಾ ಹೊಡೀತೀವಿ. ಮಳೆ, ಋತುಗಳು ಎಲ್ಲಾ ನಿಗದಿ ಕಾಲಕ್ಕೆ, ಎಷ್ಟು ಬೇಕೋ ಅಷ್ಟು ಬಂದ್ರೆ ನಮ್ಮ ಜೀವನ ಸುತೂತ್ರವಾಗಿ ಹೋಗುತ್ತೆ. ಅವುಗಳಿಗೆ ಯಾರು

ರೆಸಲಷನ್ ಮಾಡಿಕೊಳ್ಳಿ ಅಂತ ಹೇಳ್ತಾರೆ? ಆ ಭಗವಂತಾನೆ ಮಾಡ್ತಿರ್ಬೇಕು'.

'ಭಗವಂತ ಅಂದ್ರೆ ಜ್ಞಾಪಕ ಬಂತು. ದೇವರ್ನ ಏನು ಕೊಡೂಂತ ಕೇಳ್ಕೊಳ್ತೀಯಾ ಅಜ್ಜಿ?'

'ದೇವ್ರಿಗೆ ಬೇರೆ ಕೆಲ್ಸ ಇಲ್ವಾ? ನಾವೆಲ್ಲಾ ಕೇಳಿದ್ದನ್ನ ದೇವ್ರು ಕೊಡ್ತಾ ಹೋದ್ರೆ ನಾವೆಲ್ಲಾರೂ ಕೋಟ್ಯಾಧಿಪತಿಗಳೇ. ನಮಗೆ ಯಾರಿಗೂ ಮುಪ್ಪಿಲ್ಲ ಸಾವಿಲ್ಲ. ನಿನಗೆ ಲಾಡೂ ಅಂದ್ರಂತೂ ಬಹಳ ಇಷ್ಟ. ನೀನು ಎಷ್ಟು ಲಾಡು ತಿಂದ್ರೂ ಏನು ಆಗ್ಬಾರ್ದೂಂತ ದೇವ್ರು ನಿನಗೆ ವರ ಕೊಡ್ಬೇಕು ಅಲ್ವಾ?'

'ನನ್ನ ಲಾಡೂ ಪೋತ ಅಂತ ಹೇಳ್ತಿದೀಯಾ?'

'ಮಾತಿಗೆ ಹೇಳ್ದೆ.. ನಮಗೆ ಎಷ್ಟು ಕೊಡಬೇಕೂಂತ ಅವನಿಗೆ ಗೊತ್ತು. ಜಾಸ್ತೀನೂ ಅಲ್ಲಾ ಕಡಿಮೆನೂ ಅಲ್ಲ. ಇವ್ಳು ನನ್ನ ಪೂಜೆ ಮಾಡ್ತಾಳೇ ಇವ್ಳಿಗೆ ಕೊಡ್ತೀನಿ, ಅವ್ಳು ನನ್ನ ಪೂಜೆ ಮಾಡಲ್ಲಾ.. ಅವ್ಳಿಗೆ ಕೊಡಲ್ಲಾ ಅಂತ ದೇವ್ರು ಯೋಚಿಸಲ್ಲಾ. ಇನ್ನೊಂದು..'

'ಏನಜ್ಜಿ?'

'ಪ್ರಪಂಚದಲ್ಲಿ ನಾವೊಬ್ರೇ ಅಲ್ಲಾ ಇರೋದು! ದೇವ್ರಿಗೆ ಇರೋ ಜವಾಬ್ದಾರೀನ ಜ್ಞಾಪಿಸ್ಕೊ. ಭೂಮಿ, ಸೂರ್ಯ, ಚಂದ್ರ, ಸಮುದ್ರ , ಪರ್ವತಗಳು ಇವುಗಳಲ್ಲೆರ ಹೊಣೇನ ಒಂದು ಕ್ಷಣ ಬಿಡುವಿಲ್ದೆ, ತೂಕಡ್ಸ್ದೆ ಹೊತ್ಕೊಂಡಿದಾನೆ. ಹುಳ ಹುಪ್ಪಟೆ, ಕ್ರಿಮಿ ಕೀಟಗಳಿಂದ ಹಿಡಿದು, ಆನೆ, ಹುಲಿ, ಸಿಂಹಾನೂ ನೋಡ್ಕೊಳ್ತಾನೆ... ಎಲ್ಲಾದಕ್ಕೂ ಲಿಮಿಟ್ಸ್ ಕೊಟ್ಟು ಮತ್ತು ಅದರ ಜವಾಬ್ದಾರೀನೂ ಹೊತ್ತೀದಾನೆ.. ಪ್ರತಿಯೊಂದಕ್ಕೂ ಇತಿ ಮಿತಿ ಕೊಟ್ಟಿದಾನೆ'.

'ಹೌದಜ್ಜಿ! ನಮಗೆ ಇತಿ ಮಿತಿ ಗೊತ್ತಿಲ್ಲ.'

'ಅದಕ್ಕೆ ಪ್ರಪಂಚಾನ ಈ ಸ್ಥಿತಿಗೆ ತಂದಿಟ್ಟೀದೀವಿ! ಬುದ್ಧಿ ಕಡಿಮೆ ಇದ್ರೂ ನೀನು ಮದ್ಯೆ ಮದ್ಯೆ ಉಪಯೋಗಿಸ್ತೀಯ! ನಾವೂ ಇತಿ ಮಿತೀಲಿ ಇರ್ಬೇಕು ಆಗ಼್ೇ ಜೀವನ ಹಸನಾಗಿರುತ್ತೆ ಕಣೋ!

'ಅಜ್ಜಿ! ಇವತ್ತು ಮೋದಿ ಮಾತಾಡೋ ಹಾಗೆ ಮಾತಾಡಿ ನನ್ನ ಮೋಡಿ ಮಾಡಿದೀಯ. ಸಂಜೆ ಒಂದು ಸೆಲಿಬ್ರೇಷನ್ ಮಾಡೋಣ. ಚಿಯರ್ಸ್ ಮಾಡೋಣ್ವಾ?'

'ಥೂ! ಮನೆಹಾಳ!

**ಬರವಣಿಗೆ**

ಹೊಸವರ್ಷಕ್ಕೆ ಹೊಸ ಪೆನ್ನಿನಲ್ಲಿ
ಏನಾದರೂ ಬರೆಯಬೇಕೆಂದು
ಹೆಂಡತಿಯನ್ನು ಹಾಳೆ ಕೇಳಿದಂದು
ಕೊಟ್ಟಳು ಚೆಕ್ ಬುಕ್ಕಿನ ಹಾಳೆಯನ್ನು !!

Published on 3rd of every month
Mailed on 5th of every month
Mailed at: Bangalore P.S.O. 560026

Registered - KA / BGW - 544 / 2018 - 2020
**RNI - KAR-KAN / 2005 / 15457**

Printed by: V.R. NATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55 Editor : M. SHIVAKUMAR
No. of Pages: **40+4** APARANJI KANNADA MONTHLY.